
ಶ್ರೀ ಮಹಾಲಿಂಗೇಶ್ವರ ವೈಭವ

ಮೈಸೂರಿನ ಕೆ. ಹೆಮ್ಮನಹಳ್ಳಿಯ
ಹೊಯ್ಸಳ ಸ್ಥಾಪಿತ
ಶ್ರೀ ಮಹಾಲಿಂಗೇಶ್ವರ ದೇವಾಲಯದ ಇತಿಹಾಸ




ಮಹಾಲಿಂಗೇಶ್ವರ
ಸೇವಾ
ಸಮಿತಿ (ರಿ)

ಬೆಲೆ ರೂ. ೧೦/-

ಶ್ರೀ ಮಹಾಲಿಂಗೇಶ್ವರ ವೈಭವ

ಮೈಸೂರಿನ ಕೆ. ಹೆಮ್ಮನಹಳ್ಳಿಯ
ಹೊಯ್ಸಳ ಸ್ಥಾಪಿತ
ಶ್ರೀ ಮಹಾಲಿಂಗೇಶ್ವರ ದೇವಾಲಯದ ಇತಿಹಾಸ



ಮಹಾಲಿಂಗೇಶ್ವರ
ಸೇವಾ
ಸಮಿತಿ (ರಿ)

ಬೆಲೆ ರೂ. ೧೦/-

ಶ್ರೀ ಮಹಾಲಿಂಗೇಶ್ವರ ವೈಭವ, ಮೈಸೂರಿನ ಕೆ. ಹೆಮ್ಮನಹಳ್ಳಿಯ ಹೊಯ್ಸ
ರಿಂದ ಸ್ಥಾಪಿತವಾದ ಶ್ರೀ ಮಹಾಲಿಂಗೇಶ್ವರ ದೇವಾಲಯದ ಇತಿಹಾಸ ತಿಳಿಸುವ
ಕೈಪಿಡಿ. ಸಂಗ್ರಹಕಾರರು : ಜಿ. ಎನ್. ಅನಂತವರ್ಧನ, ೬೫, ಗುರಿಕಾರ ದೇವಣ್ಣ
ರಸ್ತೆ, ೧ನೇ ತಿರುವು, ಖಿಲ್ಲೆ ಮೊಹಲ್ಲಾ, ಮೈಸೂರು ೫೭೦ ೦೦೪
© 0821-94492 64920

ಮೊದಲ ಮುದ್ರಣ : ೨೦೦೮

ಪ್ರಕಾಶಕರು
ಮಹಾಲಿಂಗೇಶ್ವರ ಸೇವಾ ಸಮಿತಿ ರಿ
೬೫, ಗುರಿಕಾರ ದೇವಣ್ಣ ರಸ್ತೆ, ೧ನೇ ತಿರುವು
ಖಿಲ್ಲೆ ಮೊಹಲ್ಲಾ, ಮೈಸೂರು ೫೭೦ ೦೦೪.
© 0821-2447952

ಬೆಲೆ : ರೂ. ೧೦

ಮುದ್ರಕರು : ಹರ್ಷ ಪ್ರಿಂಟರ್ಸ್
೧೫ನೇ ತಿರುವು, ಬಸವೇಶ್ವರ ರಸ್ತೆ, ಮೈಸೂರು © 0821-2332176

ಅರಿಕೆ

ನಮ್ಮ ದೇವಾಲಯವು ಧಾರ್ಮಿಕವಲ್ಲದೆ ಸಾಂಸ್ಕೃತವಾಗಿಯೂ ಗ್ರಾಮೀಣ ನತೆಯ ಆಶೋತ್ತರಗಳಿಗೆ ಸ್ಪಂದಿಸಲೆಂದು ಯೋಜಿಸಿದ ಕಾರ್ಯಕ್ರಮ ಮೂರು :

೧. ಮಹಾಶಿವರಾತ್ರಿಗೆ ಜಾತ್ರೆ ಹಾಗೂ ಸುತ್ತಲಿನ ಒಂದೊಂದು ಗ್ರಾಮದವರಿಂದ ಪೌರಾಣಿಕ ನಾಟಕ ;

೨. ಸಾಮೂಹಿಕ ಮದುವೆ ಮತ್ತು

೩. ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ

ಮಹಾಶಿವರಾತ್ರಿ ಜಾತ್ರೆಯಲ್ಲಿ ಪಾಲ್ಗೊಂಡ ಗ್ರಾಮದವರು :

೧. ಕೆ. ಆರ್.ಮಿಲ್ ಕಾಲೋನಿ	೨೭.೨.೧೯೯೫	ದಕ್ಷಯಜ್ಞ ನಾಟಕ
೨. ಮಲ್ಲಹಳ್ಳಿ, ನಂಜನಗೂಡು ತಾ.	೧೭.೨.೧೯೯೬	ಲವಕುಶ ಮೂಡಲಪಾಯ ಯಕ್ಷಗಾನ
೩. ಶೆಟ್ಟಿನಾಯಕನಹಳ್ಳಿ	೬.೩.೧೯೯೭	ಸಿದ್ದಪ್ಪಾಜಿ ಪವಾಡಗಳು
೪. ಕೆ. ಹೆಮ್ಮನಹಳ್ಳಿ	೨೫.೨.೧೯೯೮	ಶ್ರೀಕೃಷ್ಣ ಗಾರುಡಿ ನಾಟಕ ಮತ್ತು ನಾಡಕುಸ್ತಿ
೫. ಮೈಸೂರು	೧೪.೨.೧೯೯೯	ಭೂಕೈಲಾಸ - ಯಕ್ಷಗಾನ ತಾಳಮದ್ದಲೆ
೬. ಮೈಸೂರು	೪.೩.೨೦೦೦	ಹರಿಕಥೆ - ಸಂತ ಶ್ರೀ ಭದ್ರಗಿರಿ ಅಚ್ಯುತದಾಸ್‌ಜಿ
೭. ಬೆಳವಾಡಿ	೨೧.೨.೨೦೦೧	ಸಂಪೂರ್ಣ ರಾಮಾಯಣ
೮. ಕೂರ್ಗಳ್ಳಿ	೧೨.೩.೨೦೦೨	ಶ್ರೀಕೃಷ್ಣ ಸಂಧಾನ ನಾಟಕ
೯. ಮರಟಿಕ್ಯಾತನಹಳ್ಳಿ	೧.೩.೨೦೦೩	ಹೇಮಾವತಿ ಪರಿಮಯ
೧೦. ಭೋಗಾದಿ	೧೮.೨.೨೦೦೪	ಶಶಿರೇಖ ಪರಿಣಯ - ಮಾಯಾಬಜಾರ್
೧೧. ದಾಸನಕೊಪ್ಪಲು	೮.೩.೨೦೦೫	ಸಂಪೂರ್ಣ ಕುರುಕ್ಷೇತ್ರ
೧೨. ಕಮರಳ್ಳಿ	೨೬.೨.೨೦೦೬	ಶಿವಜಲಂಧರ - ದೇವೇಂದ್ರನ ಗರ್ವಭಂಗ
೧೩. ಹುಯ್ಯಾಳು	೧೬.೨.೨೦೦೭	ಸಂಪೂರ್ಣ ರಾಮಾಯಣ
೧೪. ಸಾಹುಕಾರ್ ಹುಂಡಿ	೫.೩.೨೦೦೮	ಕುರುಕ್ಷೇತ್ರ ನಾಟಕ

೨೦೦೫ರಲ್ಲಿ ನಡೆದ ಮೊದಲ ಸಾಮೂಹಿಕ ಮದುವೆಯಲ್ಲಿ ಏಳು ಜೊತೆ, ೨೦೦
ರಲ್ಲಿ ಐದು ಜೊತೆ, ೨೦೦೭ರಲ್ಲಿ ಐದು ಜೊತೆ ಮತ್ತು ೨೦೦೮ರಲ್ಲಿ ಆರು ಜೊ
ದಾಂಪತ್ಯಜೀವನಕ್ಕೆ ಕಾಲಿಟ್ಟರು. ೨೦೦೬ರಲ್ಲಿ ಏರ್ಪಡಿಸಿದ್ದ ಮೊದಲ ಶಿಬಿರದಲ
೬೦ ಮಕ್ಕಳು, ೨೦೦೭ರಲ್ಲಿ ೮೦ ಮಕ್ಕಳು ಭಾಗವಹಿಸಿದ್ದರು. ದಿನಾಂಕ ೧೮.೫.೨೦೦
ರಿಂದ ೨೫.೫.೨೦೦೮ರವರೆಗೆ ಏಳು ದಿನಗಳ ಶಿಬಿರದಲ್ಲಿ ಸುಮಾರು ೧೫೦ ಮಕ್ಕಳ
ಭಾಗವಹಿಸಬಹುದು. ಈ ಶಿಬಿರದ ಆರಂಭದ ದಿನ ಈ ಕೈಪಿಡಿಯು ಅನಾವರ
ಗೊಳ್ಳುತ್ತಿದೆ. ಇದರಲ್ಲಿನ ವಿಷಯ ಮಕ್ಕಳ ಕ್ರಿಯಾಶಕ್ತಿಗೆ ಪ್ರಚೋದನೆಯಾಗಲೆಂದ
ಹಾರೈಸುವೆ.

ದೇವಾಲಯದ ಈ ಚಟುವಟಿಕೆಗಳಿಗೆಲ್ಲಾ ಸಾಹುಕಾರ್‌ಹುಂಡಿಯ ನಂಜುಂಡ
ಗೌಡರು ಮತ್ತು ಅವರ ಧರ್ಮಪತ್ನಿ ಚಿಕ್ಕಮ್ಮ ಬೆನ್ನೆಲುಬು. ಅವರ ಸೇವೆ, ತ್ಯಾಗ
ಶ್ರಮ, ಬದ್ಧತೆ ಹಾಗೂ ಪ್ರೀತಿ ಅಸದಳ. ದೇವಾಲಯದ ಕಾರ್ಯಗಳಿಗೆ ಪ್ರಾ
ಕೊಡಲೂ ಸಿದ್ಧರಿರುವ ಅಪ್ರತಿಮ ವ್ಯಕ್ತಿತ್ವದವರು. ಅವರಿಗೆ ನಮ್ಮ ನಮನಗಳ
ಅದೆಷ್ಟೋ ದಾನಿಗಳು, ಹಿತೈಷಿಗಳು, ಕಾರ್ಯಕರ್ತರು ನಮ್ಮ ದೇವಾಲಯ
ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಅವರಿಗೆಲ್ಲಾ ನಮ್ಮ ಆರಾಧ್ಯ ದೇವನಾ
ಶ್ರೀ ಮಹಾಲಿಂಗೇಶ್ವರ ಸ್ವಾಮಿಯು ಸಕಲ ಸೌಭಾಗ್ಯಗಳನ್ನು ನೀಡಿ ಹರಸಲೆಂದ
ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮಲ್ಲಿ ಮದುವೆ ಇತ್ಯಾದಿ ಕಾರ್ಯಕ್ರಮಕ್ಕೆ ಕಲ್ಯಾಣ ಮಂಟಪ, ಊಟದ ಮನ
ಅಡುಗೆ ಪಾತ್ರೆಗಳು ಬಹಳ ಕಡಿಮೆ ಬಾಡಿಗೆಗೆ ಲಭ್ಯವಿದೆ. ಸಾಂಸ್ಕೃತಿಕ ಚಟುವಟಿ
ಗಳಾದ ನಾಟಕ, ಯಕ್ಷಗಾನ, ಸಭೆ ಸಮಾರಂಭಕ್ಕೂ ಬಯಲು ರಂಗಮಂದಿರ
ಸಭಾಂಗಣದ ವ್ಯವಸ್ಥೆಯೂ ಇದೆ.

೧೪.೫.೨೦೦೮ ಬುಧವಾರ　　　　　　　　　ಜಿ. ಎನ್. ಅನಂತವರ್ಧನ
ಸರ್ವಧಾರಿ ದಶಮಿ ಪುಬ್ಬಾ, ವೈಶಾಖ ಶುಕ್ಲ　　　　　　　ಕಾರ್ಯದರ್ಶಿ

ಪ್ರವೇಶ

ಸುಪವಿತ್ರ ಭಾರತದ ಆಸ್ತಿಕರಾದ ನಾವು ದೇವರೊಬ್ಬ ಇದ್ದಾನೆಂದೂ ಸರ್ವಾಂತರ ಸ್ವಾಮಿಯಾಗಿ ನಮ್ಮನ್ನು ನಡೆಸುತ್ತಿದ್ದಾನೆಂದು ನಂಬಿದ್ದೇವೆ. ಎಲ್ಲಾ ಸೃಷ್ಟಿಗೆ ಕಾರಣೀಭೂತಳಾದ ತಾಯಿ ಶ್ರೀ ದೇವಿಯು ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ ಕಾರ್ಯಗಳು ನಿರಂತರವಾಗಿ ನಡೆಯಲೆಂದು ಬ್ರಹ್ಮ ವಿಷ್ಣು ಮಹೇಶ್ವರನನ್ನು ಸೃಷ್ಟಿಸಿ ನೇಮಿಸಿದಳು. ದುಷ್ಟನಿಗ್ರಹ ಶಿಷ್ಟ ಪರಿಪಾಲನೆಗೋಸ್ಕರ ವಿಷ್ಣು ಹತ್ತು ಅವತಾರಗಳನ್ನು ಎತ್ತಿದರೆ ಮಹೇಶ್ವರನು ಇಪ್ಪತ್ತೈದು ಅವತಾರಗಳನ್ನೆತ್ತಿದನು. ಮಹೇಶ್ವರನ ೨೫ನೇ ಅವತಾರವೇ ಲಿಂಗೋದ್ಭವ. ಲಿಂಗದಿಂದ ಉದ್ಭವಗೊಂಡು ಮಹಾಲಿಂಗೇಶ್ವರ ಎಂಬ ಹೆಸರಿನಿಂದ ಮೈಸೂರು ತಾಲೂಕಿನ ಕೆ. ಹೆಮ್ಮನಹಳ್ಳಿಯ ಸರ್ವಮಂಗಳ ಪುಣ್ಯಕ್ಷೇತ್ರದಲ್ಲಿ ಸರ್ವರಿಗೂ ಸರ್ವಕಾಲದಲ್ಲೂ ಮಂಗಳವನ್ನುಂಟುಮಾಡಲು ನೆಲೆಸಿದ್ದಾನೆ.

ಶಿಲಾಶಾಸನ

ಕುಮಾರಬೀಡು ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾಲಯದ ಎದುರಿಗೆ ಇತಿಹಾಸದ ಮೇಲೆ ಬೆಳಕನ್ನು ಬೀರುವ ಶಿಲಾಶಾಸನ ಸಂರಕ್ಷಿಸಲ್ಪಟ್ಟಿದೆ. ಇದರ ಪಾಠ ಮತ್ತು ಆಂಗ್ಲಭಾಷಾಂತರವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿರುವ ಎಪಿಗ್ರಾಫಿಯಾ ಕರ್ನಾಟಿಕಾದ ೫ನೇ ಸಂಪುಟದಲ್ಲಿ (ಶಾಸನ ಸಂಖ್ಯೆ ೨೧೪) ನೋಡಬಹುದು. ಶಾಸನದ ಯಥಾವತ್ತು ಪಾಠ ಹೀಗಿದೆ—

ಸ್ವಸ್ತಿ ಶ್ರೀ ಮನ್ಮಹಾಮಣ್ಡಳೇಶ್ವರಂ ತ್ರಿಭುವನ ಮಲ್ಲ ತಳೆ
ಕಾಡು ಕೊಂಗು ನಂಗಲಿ ಬನವಾಸೆ ಗಂಗವಾಡಿ ನೊಣಂಬವಾಡಿ ಗೊ
ಣ್ಡ ಭುಜಬಳ ವೀರಗಂಗನ ಸಹಾಯಸೂರ ಸನಿವಾರಸಿದ್ಧಿ ಗಿರಿದುರ್ಗ್ಗಮ
ಲ್ಲ ಚಲಂದಕ ರಾಮ ನಿಸಂಕ ಪ್ರತಾಪ ಹೊಯ್ಸಳ ಶ್ರೀವೀರಬಲ್ಲಾಳು ದೇ
ವರ ಸರ್ವಾಂಗ ಲಕ್ಷ್ಮೀ ಬಮ್ಮಲ ಮಹಾದೇವಿಯರ ತಂದೆ ಶ್ರೀಮನ್ಮಹಾ
ಪಸಾಯತಂ ಪರಮವಿಶ್ವಾಸಿ ಮೊಖರಿ ಲಕ್ಕಯ್ಯಂಗಳ ಬೆಸದಿಂ
ಹೆಗಡೆ ಮಹದೇವಂಗಳು ಸಖವರಿ ೧೧೧೧ನೆಯ ಕೀಲಕ ಸಂ
ವತ್ಸರದ ಅಮಾವಾಸೆ ಸೂರ್ಯಗ್ರಹಣ ಸುಕ್ರವಾರದಂದು ಹೆ
ಮ್ಮನ ಹಳಿಯ ಮೂಲಸ್ತಾನ ಶ್ರೀ ಗಂಗೇಶ್ವರ ದೇವರ ನಂದ
ದೀವಿಗೆಗೆ ತೆಲಿಗ ಹೊಯ್ಸಳಮನೆ ಎತ್ತಿನಗಾಣದ ಸುಂಕವಂ ಸರ್ವ

ನಮಸ್ಯವಾಗಿ ಧಾರಾಪೂರ್ವಕಂ ಮಾಡಿ ಬಿಟ್ಟ ಎರಡು ಸಲ
ಗೆಯ ಬೆದೆ ಗದ್ದೆ ಬೆದ್ದಲೆ ವೊಂದು ಬೇಲಿ ನಂದಿಯುಮಂ ವಿನಾಯಕನು
ಮುಂ ಮಾಡಿಸಿದ. ಕಣ್ಣತ್ತರ ಕೆಜೆಯ ಗವುಂಡನ ಮಗ ಮದಿಗವುಂಡ
ಕಣ್ಣತರ ಕೆಸವಗವುಂಡ ಬಲ್ಲಾಳಗವುಂಡ ಕೇತಗವುಂಡ ಗ
ವುಂಡಚ ಇ ದಮ್ಮರ್ವಂ ಪ್ರತಿಪಾಲಿಸವರು ಸ್ತಾನಪ
ತಿ ಉಡೆಯಾಂಡೆಯ ಮಕಳು ಮಾದೆಯಾಂಡೆ ಪಂಡಿತಾಂಡೆ ಇ ಧ
ಮ್ಮವಂ ಪ್ರತಿಪಾಳಿಸುವರು. ಪ್ರಿಯದಿಂ ದಿಂತಿದನೆಯ್ದ
ಕಾಯ್ದ ಪುರುಷಂಗಾಯುಂ ಜಯಶ್ರೀಯಮಕ್ಕಳಿ ಮಿದಂ
ಕಾಯ್ದು ಕಾಯದ ಮಹಾಪಾಪಿಗೆ ಎಕ್ಕೋಟಿ ಮುನೀಂದ್ರ
ರಂ ಕವಿಲೆಯಂ ವೇದಾಢ್ಯರಂ ಕೊಂದುದೊಂರಯಸಂ ಪೊ
ರ್ದ್ದಿಪುದೆಂದು ಸಾಧಿಪುದು ಸಲಾಕ್ಷರಂ ಧಾತ್ರಿಯೊಳು

ವ್ಯಾಖ್ಯಾನ

ಕ್ರಿ. ಶ. ೧೧೭೩ ರಿಂದ ೧೨೨೦ರ ತನಕ ರಾಜ್ಯಭಾರ ಮಾಡಿದ ಹೊಯ್ಸಳ ದೊ
ಇಮ್ಮಡಿ ವೀರಬಲ್ಲಾಳನ ಪಟ್ಟದರಸಿ ಬಮ್ಮಲ ಮಹಾದೇವಿಯ ತಂದೆ ಮೊಖ
ಲಕ್ಕಯ್ಯನ ಆಜ್ಞೆಯಂತೆ ಹೆಗಡೆ ಮಹಾದೇವನು ಸಖ ೧೧೧೧ ಕೀಲಕ ಸಂವತ್ಸರ
ಅಮಾವಾಸ್ಯೆ ಸೂರ್ಯಗ್ರಹಣ ಶುಕ್ರವಾರದಂದು (ನಿಜ ಶ್ರಾವಣ ಮಾಸ) ಹೆಮ್ಮನಹ
ಯಲ್ಲಿ ಮೊದಲಿನಿಂದಲೂ ಇದ್ದ ಶ್ರೀ ಗಂಗೇಶ್ವರ ದೇವಾಲಯವನ್ನು ಜೀರ್ಣೋದ್ಧಾ
ಗೊಳಿಸಿ ಈ ಮಹಾಲಿಂಗೇಶ್ವರ ದೇವಾಲಯವನ್ನು ನಿರ್ಮಿಸಿದ. ಇದರ ನಂದಾದೀಪ
ಹೊಯ್ಸಳಮನೆಯಲ್ಲಿರುವ ಗಾಣದ ಸುಂಕವು, ಎರಡು ಬೆಳೆ ತೆಗೆಯುವ ನೀರಿನ ಗದ
ಯನ್ನೂ ಒಂದೆ ಬೆಳೆ ತೆಗೆಯುವ ಒಣ ಭೂಮಿಯನ್ನೂ ದಾನ ನೀಡಿದ. ನಂದಿಯನ್ನೂ
ವಿನಾಯಕನನ್ನೂ ಮಾಡಿಸಿದ. ಈ ಧರ್ಮವನ್ನು ಎಂದರೆ ದೇವಾಲಯವನ್ನು ಕಣ್ಣತ್ತ
ಕೆರೆಯ ಗೌಡನ ಮಗ ಮಾದೇಗೌಡ, ಕಣ್ಣತರ ಕೇಶವಗೌಡ, ಬಲ್ಲಾಳಗೌಡ, ಕೇತಗೌ
ಹಾಗೂ ಇವರ ಮಕ್ಕಳು ರಕ್ಷಕರಾಗಿರುತ್ತಾರೆ. ಸ್ತಾನಪತಿ ಉಡೆಯಾಂಡೆಯ ಮಕ್ಕಳ
ಮಾದಯಾಂಡೆ ಮತ್ತು ಪಂಡಿತಾಂಡೆ ಈ ದೇವಾಲಯವನ್ನು ನಡೆಸುವರು. ಪ್ರೀ
ಯಿಂದ ಈ ಧರ್ಮವನ್ನು ರಕ್ಷಿಸಿದವರು ದೀರ್ಘಾಯುಷ್ಯರಾಗಿ ಸಮೃದ್ಧರಾಗುತ್ತಾರ
ಸಿಟ್ಟಿನಿಂದ ಇದನ್ನು ರಕ್ಷಿಸದ ಮಹಾ ಪಾಪಿಗೆ ಏಳುಕೋಟಿ ಋಷಿಮುನಿಗಳನ್ನೂ
ಗಬ್ಬದ ಹಸುಗಳನ್ನೂ, ವೇದಪಂಡಿತರನ್ನೂ ಕೊಂದಂತಹ ಪಾಪ ತಟ್ಟುವುದೆಂದ
ಈ ಭೂಮಿಯ ಮೇಲಿನ ಕಲ್ಲಿನಲ್ಲಿ ಕೆತ್ತಿಸಿದ ಶಾಸನ ಹೇಳುತ್ತದೆ.

ಜೀರ್ಣೋದ್ಧಾರ

ಅಪಾರ ಮಹಿಮಾನ್ವಿತೆ ಗಂಗೆ ಮೈಮನಗಳ ಕೊಳೆ ತೊಳೆಯಬಲ್ಲ ದಿವ್ಯನದಿ. ಬ್ರಹ್ಮನ ಕಮಂಡಲದಿಂದ ಉದ್ಭವಿಸಿ, ಹರಿಯ ಪಾದದ ಮೂಲಕ ಹರನ ಜಡೆಗೆ ಧುಮುಕಿ ಭೂಮಿಮೇಲಿನ ಗಂಗೋತ್ರಿಗೆ ಇಳಿದು ಹರಿದು ಕಾಶೀಕ್ಷೇತ್ರವನ್ನು ಪಾವನಗೊಳಿಸಿ ದಳು. ಶ್ರೀಮನ್ನಾರಯಣನೇ ಅವತಾರವೆತ್ತಿದ ಕಪಿಲಮುನಿಯ ಕೋಪದಿಂದ ಬೂದಿ ಯಾದ ಸೂರ್ಯವಂಶದ ಸಗರಪುತ್ರರನ್ನು ಉದ್ಧರಿಸಲು ಇಕ್ಷ್ವಾಕುವಂಶದ ದಿಲೀಪನ ಮಗ ಭಗೀರಥನ ಸತ್ಪ್ರಯತ್ನದ ಫಲವೇ ಭಾಗೀರಥಿ (ಗಂಗೆ). ಈ ಭಗೀರಥನ ವಂಶಸ್ಥರಾದ ಉಪ್ಪಾರಶೆಟ್ಟರು ಹೆಮ್ಮನಹಳ್ಳಿಯಲ್ಲಿದ್ದು ಗ್ರಾಮದೇವತೆಯಾಗಿ ಗಂಗೇಶ್ವರನನ್ನು ಪೂಜಿಸುತ್ತಿದ್ದು ಮುಂದೆ ಜೀರ್ಣೋದ್ಧಾರಗೊಂಡು ಶ್ರೀಮಹಾ ಲಿಂಗೇಶ್ವರನಾಗಿ ನೆಲೆನಿಂತ. ಸುತ್ತಲಿನ ಹದಿನೆಂಟು ಗ್ರಾಮಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಕೇಂದ್ರವಾಗಿದ್ದ ಹೆಮ್ಮನಹಳ್ಳಿಯ ಶ್ರೀಮಹಾಲಿಂಗೇಶ್ವರ ಸರ್ವಮಂಗಳ ಪುಣ್ಯಕ್ಷೇತ್ರವೆಂದೇ ಪ್ರಸಿದ್ಧವಾಗಿತ್ತು. ಇಂದಿಗೂ ಹೆಮ್ಮನಹಳ್ಳಿಯಲ್ಲಿ ಉಪ್ಪಾರ ಶೆಟ್ಟರು ಹೆಚ್ಚಿನ ಸಂಖ್ಯೆ ಯಲ್ಲಿದ್ದಾರೆ.

ಮೈಸೂರಿನ ಮಹಾರಾಜ ಬೆಟ್ಟದ ಚಾಮರಾಜ ಒಡೆಯರ್ ತನ್ನ ಮೂರು ಗಂಡು ಮಕ್ಕಳ ಪೈಕಿ ಹಿರಿಯನಾದ ತಿಮ್ಮರಾಜ ಒಡೆಯರ್‌ಗೆ ಈ ಕ್ಷೇತ್ರದ ಆಡಳಿತವನ್ನು ವಹಿಸಿಕೊಟ್ಟದ್ದು, ಸಮೀಪದ ಕುಮಾರಬೀಡು ಗ್ರಾಮದಲ್ಲಿ ಆತ ನೆಲೆಸಿದ್ದ ಕುರುಹು ಗಳು ಈಗಲೂ ಕಾಣಬಹುದಾಗಿದೆ. ಕ್ರಿ. ಶ. ೧೯೦೮ನೆಯ ಇಸವಿಯಲ್ಲಿ ಈ ಕ್ಷೇತ್ರ ದಲ್ಲಿ ಪ್ಲೇಗ್ ಮಾರಿ ಕಾಯಿಲೆಯಿಂದ (ಹಯದವನಾಚಾರ್ಯ ಗೆಜೆಟ್) ಗ್ರಾಮಸ್ಥರು ಗ್ರಾಮವನ್ನೇ ತ್ಯಜಿಸಿ ಈಗಿರುವ ಜಾಗದಲ್ಲಿ ನೆಲೆಸಿದ್ದಕ್ಕೆ ಹೊಸೂರು ಎಂದು ರೂಢಿ ಯಲ್ಲಿ ಬಂದಿತು. ಭಕ್ತರು ಶಿವಾಲಯವನ್ನು ಬಿಟ್ಟುಹೋದರೂ ಶಿವ ಧ್ಯಾನದಲ್ಲೇ ನಿರತನಾಗಿದ್ದುಕೊಂಡಿದ್ದನು. ಕೃಷ್ಣರಾಜ ಒಡೆಯರ ಕಾಲದಲ್ಲಿ ದೇವಾಲಯದ ಮುಂಭಾಗದಲ್ಲೇ ಪೂರ್ಣಯ್ಯನ ಕಾಲುವೆ ನಿರ್ಮಾಣಗೊಂಡಿತು.

೩೧ನೇ ಅಕ್ಟೋಬರ್ ೧೯೯೩ ಭಾನುವಾರ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ನ್ಯಾಸ ಹಾಗೂ ಗ್ರಾಮಸ್ಥರ ಜಂಟಿ ಕಾರ್ಯಾಚರಣೆಯಿಂದ ಜೀರ್ಣೋದ್ಧಾರ ಆರಂಭಗೊಂಡು ೨೧ ಸೆಪ್ಟಂಬರ್ ೧೯೯೪ ಬುಧವಾರ ಕುಂಭಾಭಿಷೇಕ ಪ್ರಾಣಪ್ರತಿಷ್ಠೆಯೊಂದಿಗೆ ಶಿವನು ಧ್ಯಾನವನ್ನು ತೊರೆದು ಭಕ್ತರ ಉದ್ಧಾರಕ್ಕೆ ಸನ್ನದ್ಧ ನಾಗಿ ನಿಂತನು.

ಹೊಸತಾಗಿ ಹಾಕಿದ ಶಿಲಾಶಾಸನದ ಪಾಠ :

ಓಂ ಶ್ರೀ ಮಂಜುನಾಥಾಯ ನಮಃ

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ

ಶ್ರೀ ವೀರೇಂದ್ರ ಹೆಗ್ಗಡೆಯವರು ಮೈಸೂರು
ತಾಲ್ಲೂಕಿನ ಕೆ. ಹೆಮ್ಮನಹಳ್ಳಿ ಗ್ರಾಮದ ಶಿಥಿಲವಾದ
ಪುರಾತನ ಮಹಾಲಿಂಗೇಶ್ವರ ಸ್ವಾಮಿಯವರ
ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವನ್ನು
ಕರ್ನಾಟಕ ರಾಜ್ಯ ಸರ್ಕಾರದ ಮುಜರಾಯಿ
ಇಲಾಖೆ ಶ್ರೀಮಹಾಲಿಂಗೇಶ್ವರ ಜೀರ್ಣೋದ್ಧಾರ
ಸಮಿತಿ ಮತ್ತು ಗ್ರಾಮಸ್ಥರ ಸಹಕಾರದಿಂದ ಸ್ವಸ್ತಿ
ಶ್ರೀ ಶಾಲಿವಾಹನ ಶಕ ವರ್ಷ ಒಂದು ಸಾವಿರದ
ಒಂಭೈನೂರ ಹದಿಮೂರನೇ ಭಾವನಾಮ ಸಂವತ್ಸರದ
ಭಾದ್ರಪದ ಕೃಷ್ಣ ದ್ವಿತೀಯ ರೇವತಿ ನಕ್ಷತ್ರ
ಬುಧವಾರದಂದು ಶ್ರೀ ಧರ್ಮಸ್ಥಳ ಮಂಜು
ನಾಥೇಶ್ವರ ಧರ್ಮೋತ್ಥಾನ ನ್ಯಾಸದ ವತಿ
ಯಿಂದ ನೆರವೇರಿಸಿದರು.

ಮೂಲಗುಡಿಯ ಎದುರಿಗೆ ೧೨ ಕಂಬಗಳ ಮುಖಮಂಟಪ ೧೯.೯.೨೦೦೦ ಭಾನುವಾರ ಆರು ಜೊತೆ ಸಾಮೂಹಿಕ ಮದುವೆ ಕಾರ್ಯಕ್ರಮದ ಮೂಲಕ ಉದ್ಘಾಟನೆಗೊಂಡಿತು. ದೇವಾಲಯದ ಈಶಾನ್ಯ ದಿಕ್ಕಿಗೆ ಶಂಕರ ಊಟದ ಮನೆ ೧೮.೩.೨೦೦೭ ಸಾಮೂಹಿಕ ಮದುವೆ ಮೂಲಕ ಉದ್ಘಾಟನೆಗೊಂಡಿತು. ೫.೩.೨೦೦೮ ಬುಧವಾ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದೊಂದಿಗೆ ನಂಜುಂಡೇಶ್ವರ ಗೋಶಾಲೆ ಸ್ಥಾಪ ಆಯ್ತು. ಮರಟಿಕ್ಯಾತನ ಹಳ್ಳಿ ಗೋಪಾಲಕೃಷ್ಣಭಟ್ ಕೊಟ್ಟ ಒಂದು ಹಳ್ಳಿಕಾರ ಕಡಸು ಹಾಗೂ ಪಿಂಜರಾ ಪೋಲ್‌ನವರು ನೀಡಿದ ಎರಡು ಕಡಸುಗಳನ್ನು ಜಿ ಸಂತಾನಕೃಷ್ಣ–ಪದ್ಮಲತಾ ಅವರಿಂದ ದಾನ ಪಡೆದುಕೊಳ್ಳುವ ಮೂಲಕ ಗೋಶಾ ಉದ್ಘಾಟನೆಗೊಂಡಿತು. ದೇವಾಲಯದ ಆಗ್ನೇಯ ದಿಕ್ಕಿನ ೭ ಗುಂಟೆ ಜಾಗ ೧೯ ರಲ್ಲೇ ಅಧ್ಯಕ್ಷರಾದ ಶ್ರೀ ಎಸ್. ಮೊಗಣ್ಣೇಗೌಡರು ದಾನ ನೀಡಿದ್ದು ಪ್ರ ಶಿವರಾತ್ರಿಯ ನಾಟಕ ಅಂದಿನಿಂದ ಅಲ್ಲೇ ನಡೆಯುತ್ತಿದೆ. ವರ್ಷದಿಂದ ವರ್ಷಕ ಅನುಭವದ ಮೇರೆಗೆ ಉತ್ತಮ ಬಯಲು ರಂಗಮಂದಿರ ನಿರ್ಮಾಣಗೊಂಡು ಎಸ್ ಮೊಗಣ್ಣೇಗೌಡ ಬಯಲು ರಂಗಮಂದಿರ ವೆಂದೇ ಪ್ರಖ್ಯಾತಗೊಂಡಿದೆ. ೨೦೦೮ರಲ್ಲಿ ಈ ಬಯಲು ರಂಗದ ಮೂಲೆಯಲ್ಲಿ ಕೊಳವೆ ಬಾವಿ ಹಾಕಿ ಒಳ್ಳೆಯ ನೀರು ಸಿಕ್ಕಿದ್ದ ಮುಖಮಂಟಪದ ಮೇಲೆ ನೀರಿನ ತೊಟ್ಟಿ ನಿರ್ಮಾಣ ಮಾಡಿ ಎಲ್ಲಾ ಕಡೆ ನೀರು ಹರಿಯುವಂತೆ ಮಾಡಿದೆ.

ಸರ್ವಮಂಗಳ ಪುಣ್ಯಕ್ಷೇತ್ರ

ಉಮಾ, ಕಾತ್ಯಾಯಿನೀ, ಗೌರಿ, ಕಾಳಿ, ಹೈಮವತೀಶ್ವರೀ, ಶಿವೇ, ಭವಾನಿ, ರುದ್ರಾಣೀ, ಶರ್ವಾಣೀ, ಸರ್ವಮಂಗಳ ಎಂದು ಮುಂತಾಗಿ ಶಿವನ ಪತ್ನಿ ಪಾರ್ವತಿಯ ಇತರ ಹೆಸರುಗಳು. ಸರ್ವಮಂಗಳಾ ಎಂದರೆ ಸದಾಕಾಲವೂ ಶುಭಪ್ರದೆ ಎಂದರ್ಥ. ಸರ್ವಮಂಗಳ ಕ್ಷೇತ್ರವೆಂದರೆ ಕಾಲ ಮತ್ತು ದೇಶದ (Time & Space) ಅಪೇಕ್ಷೆ ಯಿಲ್ಲದೇ ಸ್ವಯಂ ಮಂಗಳಮಯಕ್ಷೇತ್ರವೆಂದರ್ಥ. ಹೀಗೆ ದೇಶ, ಕಾಲ, ಸಾಪೇಕ್ಷ ವಲ್ಲದ ನಿರಪೇಕ್ಷ ಮಂಗಳಕ್ಷೇತ್ರವಿದು. ಕರುಣಾಮಯಿ ಜಗನ್ಮಾತೆಯ ಪರಮ ಔದಾರ್ಯದ ಪ್ರತೀಕವಿದು. ಈ ಕ್ಷೇತ್ರದಲ್ಲಿ ನಾಮಕರಣದಿಂದ ಮದುವೆವರೆಗಿನ ಯಾವುದೇ ಶಾಸ್ತ್ರ, ಗಣಪತಿ ಹೋಮ, ನವಗ್ರಹ ಹೋಮ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ದಿನ, ಮುಹೂರ್ತ, ಯೋಗ, ಕರಣ ಯಾವುದನ್ನೂ ನೋಡಬೇಕಾಗಿಲ್ಲ. ಎಲ್ಲಾ ದಿನಗಳೂ ಎಲ್ಲಾ ಕಾಲವೂ ಮಂಗಳಮಯವಾಗಿರುತ್ತದೆ. ಇಲ್ಲಿ ಸರ್ವದಾ (ಎಲ್ಲಾ ಕಾಲದಲ್ಲೂ), ಸರ್ವತ್ರ (ಎಲ್ಲಾ ಕಡೆಯಲ್ಲೂ), ಸರ್ವಥಾ (ಎಲ್ಲಾ ರೀತಿಯಲ್ಲೂ) ಹಾಗೂ ಸರ್ವೇಭ್ಯಃ (ಎಲ್ಲರಿಗೂ) ಮಂಗಳ. ಲಿಂಗದಲ್ಲೇ ಶಿವನ ಮುಖ ಹೊಂದಿದ ಏಕಮುಖ ಶಿವಲಿಂಗ, ಮಹಾದೇವಿ ಮತ್ತು ಮಹಾಗಣಪತಿ ಯರು ದ್ವಿಭುಜರಾಗಿ ಭಕ್ತರನ್ನು ಹರಸಲು ನಿಂತಿರುವುದು ಇಲ್ಲಿನ ವೈಶಿಷ್ಟ್ಯ. ಕಡಚಲಿ ನಲ್ಲಿ ಕೆತ್ತಿದ ನಾಲ್ಕು ಕಂಬಗಳು, ನವರಂಗ, ಸುಖನಾಸಿ, ವೀರಗಲ್ಲು, ಮಾಸ್ತಿಗಲ್ಲು ಇನ್ನಿತರ ಅನೇಕ ಪುರಾತನ ವಸ್ತುಗಳ ಸಂಗ್ರಹ ತಲೆತಲಾಂತರದವರ ಶುಭ ಹಾರೈಕೆಗಳು ಇಲ್ಲಿಗೆ ಬಂದಂತಹ ಎಲ್ಲಾ ಭಕ್ತರಿಗೆ ಲಭ್ಯ.

ನಿಮಗೆ ನಾಮಕರಣದಿಂದ ಮದುವೆವರೆಗಿನ ಯಾವುದೇ ಕಾರ್ಯ ನಡೆಸಲು ಬೇರೆ ಜಾಗದಲ್ಲಿ ಮುಹೂರ್ತಗಳು ಸಿಕ್ಕದಿದ್ದರೆ ನೇರ ನಮ್ಮಲ್ಲಿಗೆ ಬನ್ನಿ. ನಿಷಿದ್ಧ ತಿಥಿ, ವಾರ, ಮಾಸ, ನಕ್ಷತ್ರ, ದಿನ ಸರ್ವಮಂಗಳ ಪುಣ್ಯಕ್ಷೇತ್ರದಲ್ಲಿ ಅನ್ವಯವಾಗುವು ದಿಲ್ಲ. ಸಂಕಲ್ಪದ ದೃಢತೆ, ಕಾರ್ಯದ ಬದ್ಧತೆ, ಬುದ್ಧಿಯ ಸ್ಥಿರತೆ, ಯೋಜನೆಯ ಪೂರ್ಣತೆಗೆ ಕಾರಣವಾಗುವುದು. ಜೈ ಮಹಾಲಿಂಗೇಶ್ವರ.

ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ನಡೆಯುವ ಪೂಜೆಗಳ ವಿವರ

೧ ಸತ್ಯನಾರಾಯಣ, ಸಂಕಷ್ಟ, ಮಾಸಶಿವರಾತ್ರಿ, ಶನಿ ಪ್ರದೋಷ
೨ ಚಾಂದ್ರಯುಗಾದಿ ಮತ್ತು ಸೌರಯುಗಾದಿ
೩ ಶಂಕರ ಜಯಂತಿ
೪ ಗಂಗೋತ್ಪತ್ತಿಃ ವೈಶಾಖ ಶುಕ್ಲ ಸಪ್ತಮಿ
ಗಂಗಾವತಾರಃ ಜ್ಯೇಷ್ಠ ಶುಕ್ಲ ದಶಮಿ
೫ ನಾಗಪಂಚಮಿ
೬ ವರಮಹಾಲಕ್ಷ್ಮೀ ವ್ರತ
೭ ಶ್ರೀಕೃಷ್ಣ ಜನ್ಮಾಷ್ಟಮಿ
೮ ಶ್ರೀ ಗಣೇಶ ಚತುರ್ಥಿ
೯ ಅನಂತ ಚತುರ್ದಶಿ
೧೦ ಮಹಾಲಯ ಶ್ರಧ್ಧಾ / ಅಮಾವಾಸ್ಯೆ
೧೧ ನವರಾತ್ರಿ – ದಸರಾ – ಆಯುಧ ಪೂಜೆ
೧೨ ಶಾರದಾ ಪೂಜೆ (ಆಶ್ವಯುಜ ಶುಕ್ಲ ಸಪ್ತಮಿ)
೧೩ ನರಕ ಚತುರ್ದಶಿ, ದೀಪಾವಳಿ
೧೪ ಕುಂತಿ ಪೂಜೆ (ಕಾರ್ತಿಕ ಮಾಸಾದ್ಯಂತ)
೧೫ ಗೋ ಪೂಜೆ
೧೬ ವೈಕುಂಠ ಚತುರ್ದಶಿ
೧೭ ಶ್ರೀ ಸುಬ್ರಹ್ಮಣ್ಯ ಷಷ್ಠೀ
೧೮ ಎಳ್ಳಮಾವಾಸ್ಯೆ
೧೯ ಮಕರ ಸಂಕ್ರಮಣ (ಸಂಕ್ರಾಂತಿ)
೨೦ ರಥಸಪ್ತಮಿ
೨೧ ಮಹಾಶಿವರಾತ್ರಿ ಜಾತ್ರೆ, ಪೌರಾಣಿಕ ನಾಟಕ

ಸಾಮೂಹಿಕ ಮದುವೆ, ಗ್ರಾಮೀಣ ಮಕ್ಕಳಿಗೆ ಬೇಸಿಗೆ ಶಿಬಿರ

ದೇವಾಲಯದಲ್ಲಿ ಮದುವೆ ಇತ್ಯಾದಿ ಕಾರ್ಯ ನಡೆಸಲು ಅರ್ಚಕರು, ಊಟದ ಮನೆ, ಅಡುಗೆ ಮನೆ, ಮದುವೆ ಮಂಟಪ, ಪಾತ್ರೆಗಳು ಇತ್ಯಾದಿ ಎಲ್ಲಾ ವ್ಯವಸ್ಥೆ ಇದೆ.

ಗಣನಾಯ್ಕ

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ । ಸೊಲ್ಲು ।

ಎಳ್ಳುಂಡೆ ಜೇನು ತುಪ್ಪ ಗಣನಾಯ್ಕ
ನಮ್ಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ
ಉದ್ದೂ ಹೋಳಿಗೆ ತುಪ್ಪ ಗಣನಾಯ್ಕ
ನಿಮ್ಗೆ ತಪ್ಪಾದೆ ಒಪ್ಪಿಸುವೆ ಗಣನಾಯ್ಕ ॥

ಗೊನೆ ಮೇಗ್ಲ ಬಾಳೆಹಣ್ಣು ಗಣನಾಯ್ಕ
ನಿಮ್ಗೆ ಕಳಿಅಡ್ಕೆ ಚಿಗುರೆಲೆ ಗಣನಾಯ್ಕ
ಕೊಂಬೆ ಮೇಗ್ಲ ನಿಂಬೆಹಣ್ಣು ಗಣನಾಯ್ಕ
ನಿಮ್ಗೆ ಒಡಗಾಯಿ ಇಡುಗಾಯಿ ಗಣನಾಯ್ಕ ॥

ಕರ್ಪೂರ ಸಾಂರಾಣಿ ಗಣನನಾಯ್ಕ
ನಿಮ್ಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ
ಹಸುರಂಗಿ ಕಾಲ್ಗಡಗ ಗಣನಾಯ್ಕ
ನಿಮ್ಗೆ ಕುಶಲದ ಮೇಲ್ಕಟ್ಟು ಗಣನಾಯ್ಕ ॥

ಮೂಷಕ ವಾಹಣ ಗಣನಾಯ್ಕ
ನಮ್ಮ ಶಿವನ ಕುಮಾರನಯ್ಯ ಗಣನಾಯ್ಕ
ನಿಮ್ಗೆ ಹೆಂಡ್ರಿಲ್ಲ ಮಕ್ಳಿಲ್ಲ ಗಣನಾಯ್ಕ
ನೀನು ಎದ್ದು ಬಾರಯ್ಯ ಸಿದ್ಧಿ ಗಣನಾಯಕ ॥

ಬಿಲ್ಪತ್ರೆ ವನದಲ್ಲಿ ಗಣನಾಯ್ಕ
ನಿನ್ನ ಧ್ಯಾನ ಮಾಡಿ ನೆನೆದೆವಯ್ಯ ಗಣನಾಯ್ಕ
ಕಂಟಕ ಹರ ನೀನು ಗಣನಾಯ್ಕ
ನಮ್ಗೆ ವರವನು ಪಾಲಿಸಯ್ಯ ಗಣನಾಯ್ಕ ॥

ಡಾ. ಪಿ. ಕೆ. ರಾಜಶೇಖರ
ಗಂಧಾದ ಗವುಲೆದ್ದವೊ

ದ್ರೋಪತಿ ಕರಗ

ರಕ್ಕೆಯ ಒದರುತವೆ ಗಿಣಿಗಳು
ರಕ್ಕೆಯ ಒದರುತವೆ
ಅಕ್ಕ ದ್ರೋಪತಿಯ ಅರಮನೆ ಕಾಣದೆ
ದುಕ್ಕವ ಮಾಡುತವೆ । ಸೊಲ್ಲು ।

ಹೊಳೆಗೆ ಹೋಗುವಾಗ ಹೊಳುದಾವೆ ಹೊಂಬಾಳೆ
ಚಂದ್ರಾಮನಂತೆ ಚೆಲುವಾದ ।
ಚಂದ್ರಾಮನಂತೆ ಚೆಲುವಾದ ದ್ರೋಪತಿ
ಹೊಳುದಾವೆ ನಿನ್ನ ಹೊಸತಾಲಿ ।
ಮರಳು ಕರ್ಗವ ಮಾಡಿ ಸರುಪನ ಸಿಂಬಿ ಮಾಡಿ
ಬಾಪುರಿ ತೋಳ ತಿರುವೂತ ।
ಬಾಪುರಿ ತೋಳ ತಿರುವೂತ ದ್ರೋಪತಿ
ಕರಗಾವ ಹೊತ್ತು ಮೆರಿದಾಳೊ ।
ಬಳುಕೂವ ನಡುವೀಗೆ ಕುಣಿಕೇಯ ಒಡ್ಯಾಣ
ತಳುಕೆ ಛತ್ರಿಯ ನೆಳ್ಳಲ್ಲಿ ।
ತಳೂಕೆ ಛತ್ರಿಯ ನೆಳ್ಳಲ್ಲಿ ದ್ರೋಪತಿ
ಬಳುಕೂತ ಕರಗ ಹೊತ್ತಾಳೊ ।
ಅವುರೇಯ ಹೂನಂಗೆ ಅರವತ್ತಾರತಿ ಬಂದೊ
ಕರಗಾವ ಹೊತ್ತು ತರುವಾಗ ।
ಕರಗಾವ ಹೊತ್ತು ತರುವಾಗ ದ್ರೋಪತಿಗೆ
ಅರವತ್ತು ಆರತಿ ಸಮಕಟ್ಟು ।

ಡಾ. ಪಿ. ಕೆ. ರಾಜಶೇಖರ, ಜನಪದ ಮಹಾಭಾರ[ತ]

ಅರಿವೇ ಗುರು, ಆಚಾರವೇ ಶಿಷ್ಯ
ಜ್ಞಾನವೇ ಲಿಂಗ, ಪರಿಣಾಮವೇ ತಪ
ಸಮತೆ ಎಂಬುದೇ ಯೋಗ ನೋಡಾ
ಈಸುವನರಿಯದೆ ಲೋಚು ಬೋಳಾದರೇನು ?
ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

ಹಾವಿನಹಾಳಕಲ್ಲಯ (ಕ್ರಿ. ಶ. ೧೧೫೦)

ಚೆನ್ನ ಲಿಂಗವೇ

ಮಾತಾಡೋ ಮಾತಾಡೋ ಲಿಂಗವೆ
ಮಾತಾಡಲೊಲ್ಲೇಕೊ ಲಿಂಗವೆ
ಮಾತಿನ ತಾಯಾದ ಮೌನದ ಬಸುರಲಿ
ಹೂತೆಯೋ ಹೇ ಚೆನ್ನಲಿಂಗವೇ ॥

ಪರೆಯ ಮರೆಯಲ್ಲಿಹ ಲಿಂಗವೇ
ಪರೆಯುಚ್ಚಿ ಬಹೆಯೆಂದೆ ಲಿಂಗವೇ
ಹರೆಯ ಪರೆಯನ್ನೂದಿ ಹಿರಿಯ ಹಿಗ್ಗನ್ನೆಂದು
ಹರಹುವಿ ಹೇ ಚೆನ್ನಲಿಂಗವೇ ॥

ಕೇಳಿ ಬಲ್ಲೆನು ಕೇಳು ಲಿಂಗವೇ
ಪೇಳುವಿಯಾ ಹೇಳು ಲಿಂಗವೇ
ಆಳು ತಿಳಿಯದ ಯಾವ ಬಾಳಿನಲ್ಲೂ ದೇವಿ
ಆಳುವಳು ಹೇ ಚೆನ್ನಲಿಂಗವೇ ॥

ಆಡಿದ ನುಡಿಗಿಂತ ಲಿಂಗವೇ ನೀ
ಹಾಡಿದ ನುಡಿ ಲೇಸು ಲಿಂಗವೇ
ನೋಡಿದ ಕೂಡಿದ ಎದೆಯಲ್ಲಿ ಆ ರೂಪು
ಮೂಡೀತು ಹೇ ಚೆನ್ನಲಿಂಗವೇ

ದ. ರಾ. ಬೇಂದ್ರ, ಬಹತ್ತರ

ಕಾಯವ ಮರೆದು ಜೀವವನರಿಯಬೇಕು
ಜೀವವ ಮರೆದು ಜ್ಞಾನವನರಿಯಬೇಕು
ಜ್ಞಾನವ ಮರೆದು ಬೆಳಗನರಿಯಬೇಕು
ಬೆಳಗಿನ ಮರೆಯ ಈಶಾನ್ಯಮೂರ್ತಿ—
ಮಲ್ಲಿಕಾರ್ಜುನ ಲಿಂಗವನರಿಯಬೇಕು

ಶಿವಲೆಂಕ ಮಂಚಣ್ಣ (ಕ್ರಿ.ಶ. ೧೧೬೦)

ಗಜಗೌರಿ ನೋಂಪಿ ಮಾಡಿದ ಪರ್ವ

ಜಯತು ಜಯ ಜಯತು ಜಯ ಜಯತು ಜಯತೊ
ಶ್ರೀ ಕ್ರಿಷ್ಣ ಪರಮಾತ್ಮ ಜಯತು ಜಯತೋ । ಸೊಲ್ಲು ।

ಗಜನೋಂಪಿ ಹಬ್ಬಕೆ
ಭಪ್ಪನ್ನೈವತ್ತಾರು ದೇಶದ
ರಾಜ ಮಾರಾಜಾರು
ಇಂದ್ರಪ್ರಸ್ತುಕೆ ಬಂದ್ರು ।

ದುರಿಯೋಧನ ತನ್ನೆಲ್ಲ
ತಮ್ಮಂದಿರ ಕಟುಕೊಂಡು
ಗಜ–ನೋಂಪಿಗೆ ಬಂದಾನು
ಬರುವುದು ಹೆಂಗೆ ಬಂದ
ರತ್ನ–ಕಚಿತವಾದ ಅಂಗಿ
ವಜ್ರುರದ ಕಿರೀಟ
ರವರತ್ನದ ಭುಜಕೀರ್ತಿ
ಮುತ್ತೀನ ಪೆಂಡೇಯ
ರತ್ನಾಭರಣ ಧರಿಸಿ
ದಿಮ್‌ರಂಗದಿಂದವನು
ಇಂದ್ರಪ್ರಸ್ತುಕೆ ಬಂದ ।

ಚಿನ್ನದ ಕುರ್ಚಿಗಳಲಿ
ಅವುರೆಲ್ಲಾರು ಕುಳಿತಾರು
ಇಂದ್ರನೈರಾವತವ
ಪನ್ನೀರಲ್ಲಿ ಮೀಯಿಸಿ
ಗಂಧಸಿಂಧೂರಗಳ
ಲೇಪಕವ ಮಾಡಿದರು ।

ಚಿನ್ನದ ಜರಿಗಳಲಿ
ಚಿತ್ತಾರ ಬರಸಿರುವ
ಗೌಸುಗಳು ಬೆನ್ನಿಗೆ

ಕೋಟಿ–ಸೂರ್ಯ ಪ್ರಭೆಯ
ರತ್ನದ ಹಾರಗಳ
ಕುತ್ತಿಗೆಗೆ ಹಾಕಿದರು
ಚಿನ್ನದ ಮಣಿಗಂಟೆಗಳ
ಹಾರಗಳ ತೊಡಿಸಿದರು
ಚಿನ್ನದ ಸರಪಣಿಯಲ್ಲಿ
ಚೌಡಾಲೆಯನು ಬಿಗಿದು
ಆಸ್ಥಾನ ಮಂಟಪಕೆ
ಆನೆಯ ಕರತಂದರಾಗ ।

ಕಾಮಜೇನು ಬಂದಿತು
ಕಲ್ಪರುಕ್ಷ ಬಂದಿತು
ಬೇಕಾದ ಫಲಗಳು
ಬೇಕಾದ – ಹಣ್ಣುಕಾಯಿಗಳು
ಬೇಕಾದ – ದವಸ ಧಾನ್ಯಗಳ
ಬೇಕಾದ – ಕಾಳುಕಡ್ಡಿಗಳು
ಬೇಕಾದ – ಕಾಯಿಪಲ್ಲೆಗಳು
ಬೇಕಾದ – ಸೊಪ್ಪುಸದೆಗಳು
ಎಲ್ಲಾ ಮಂಟಪಕೆ ಬಂದೊ ।

ಗಂಗಾ–ನದಿ ಪುಣ್ಯಸ್ಥಳದಲ್ಲಿ
ದೇವರ ಗಡಿಗೆ ದೀಪುದ ಸೊಳ್ಳು
ಧೂಪಾರ್ತಿ ಕಳ್ಸಗಳು
ಕನ್ನಾಡಿಗಳ ಹೂಡಿ
ಅರಿಸಿನ ಕೂಕುಮ ಮಡ್ಗಿ
ಮಂಗಳಾಕ್ಷತಿ ಮಡಗಿ
ಪುನುಗು ಜವಾದಿಗಳ
ಮಡಗಿ ಗಂಗದೇವಿಗೆ
ಆಲರುವಿ ಕಂದಲು
ಎಲ್ಲಾನು ಪೂಜೆ ಮಾಡಿ
ಮಂಗ್ಳಾರ್ತಿಯನ್ನು ಬೆಳಗಿ

ಹೂವು ಹೊಂಬಾಳೆ ಧರುಸಿ
ಮಡಿವಾಳು ಮಾಚಪ್ನ ಕರ್ದು
ನಡಮುಡಿಯನ್ನು ಹಾಸಿ
ಹೂವಿನ ನಡೆಚಪ್ಪುರ್ದಲ್ಲಿ
ದೇವುಲೋಕ್ದ ಪಟ್ಟೆದಾನೆ
ಪಟ್ಟದ್ ಕುದುರೆ ಪಟ್ಟದ್ ಗೋವು
ರಂಭೆ ಊರ್ವರ್ಶಿಯರು
ಮೇನಕೆ ತಿಲೋತ್ತಮೆ
ಇವುರೆಲ್ಲಾರು ಸುಂಗಾರವಾಗಿ
ನಾಂಟ್ಯಾನಾಡುತ ಬಂದು
ಪರಮಾತ್ಮನ ಪಾದಕೆ
ಪೂಜೆಯ ಸಲ್ಸಿದರು ।

ಬಂದಂತ ಜನಕೆಲ್ಲ
ಹೂವುಗಂಧವ ಕೊಟ್ಟು
ಮುತ್ತೈದೆ ಮಂಗಳೇರ್ಗೆ
ಸೀರೆ ರವುಕೆ ಕಣ
ಐದ್ಯೆದು ಕಂಟ್ರೀ ಹಣ
ಅರಸೀನ ಕೂಕುಮ
ಬಾಗೀನಗಳ ಕೊಟ್ಟು
ಮುತ್ತೈದೇರ ಪೂಜೇಯ
ಕೊಂತ್ಯಮ್ಮ ಮಾಡಿದರು ।
ಮಂತ್ರ ಜಪುನೆ ಮಾಡಿ
ವಾಮನೇಮವ ಮಾಡಿ
ಅವಿಷೇಕಗಳ ಮಾಡಿ
ಧೂಪ ಗುಗ್ಗುಳದಿಂದ
ನೂರೊಂದು ಪೂಜೆ ಮಾಡಿ
ನೈವೇದ್ಯಗಳ ಮಾಡಿ
ತೀರ್ಥಪ್ರಸಾದಗಳ
ಮಂಗಳಾರತಿಗಳ
ನೀಡಿದರು ಜನಕೆಲ್ಲ ।

ಬಂದಿರುವ ರುಸಿಗಳು
ಸಾಧು ಸತ್ಪುರುಷರು
ದಾನಧರ್ಮ ಪಡೆದು
ಆಸುರ್ಬ್ವಾದ ಮಾಡಿದರು.
ಬಂದಿರುವ ಬ್ರಾಮಾರು
ಭಾರಿ ಭಾರಿ ದಾನಗಳ
ಪಡೆದು ಸಂತೋಸದಿಂದ
ಆಸುರ್ಬ್ವಾದ ಮಾಡಿದರು ।

ಇಂತೆ ವೈಭೋಗನೆಲ್ಲ
ನೋಡಲಿ ಅಂತ್ಹೇಳಿ
ಶ್ರೀ ಕ್ರಿಷ್ಣಪರಮಾತ್ಮ
ದ್ರುತರಾಷ್ಟ್ರ ರಾಜರಿಗೆ
ಗಾಂಧಾರಿದೇವಿಗೆ
ರುದ್ರಾಕ್ಷಿ ಕಣ್ಣುಗಳ
ಕೊಟ್ಟರು ಪರಮಾತ್ಮ
ಇಂತೆ ಅದ್ಧೂರಿಯನು
ನೋಡೀದ ಗಾಂಧಾರಿ
ತನ್ನ ಮಕ್ಕಳಿಗಿಂಥ
ವೈಭೋಗವಿಲ್ಲವೆಂದು
ಹೊಟ್ಟೆ ಉರುಕೊಂಡಳು ।

ಸಾಲುಚಪ್ಪರದಲ್ಲಿ
ಸಾಲುಸಾಲಾಗಿ ಕುಳಿತು
ಬಗೆಬಗೆಯ ಭಕ್ಷ್ಯಗಳ
ಬಂದ ಮಂದಿಗಳೆಲ್ಲ
ತಿಂದು ತೇಗಿದರು
ಬ್ರಾಮರಿಗೆ ಭೋಜುಣೆ
ಆದಂತ ಕಾಲದಲ್ಲಿ
ಕಾಣಿಕೆಗಳ ಕೊಡಲು
ವೀಳ್ಯವೇ ಇರನಿಲ್ಲ ।

ದೇವಲೋಕಕೆ ಹೋಗಿ
ಈಳ್ಯಾವ ತರುವಂತ
ಧೀರರು ಯಾರೆಂದು
ಚಿಂತೆಯ ಪಡುತಿರಲು
ಪರಮಾತ್ಮನ ಸೇಕವನು
ಆದಿಶೇಷನು ಬಂದು
ತಾನು ತರುವುದಾಗಿ
ಹೇಳಿ ದೇವಲೋಕಕೆ
ಬ್ಯೇಗ ತಾನು ನಡೆದನು ।

ಪರಮಾತ್ಮನ ಸೇವಕರು
ಬಂದಿರುವುದ ಕಂಡು
ದೇವೇಂದ್ರಾಯ ಏನೆಂದು
ಕೇಳಿದ ಕೂಡಲೆ
ಆದಿಶೇಷನು ತಾನು
ಬಂದಿರುವ ಕಾರ್ಯಗಳ
ಹೇಳಿ ವೀಳ್ಯವನು
ಕೊಡಬೇಕೆಂದು ಕೇಳಿದನು ।

ಪರಮಾತ್ಮನ ದೂತನು
ಬಂದಿರುವುದ ತಿಳಿದು
ದೇವೇಂದ್ರಾಯನು ತಾನು
ತನ್ನ ತ್ವಾಟದಲ್ಲಿರುವಂತ
ರುಂದಾವನದಲಿ ಬೆಳೆದ
ಅಡಕೆಯ ಕೊಟ್ಟನು
ಬಿಳಿಯೆಲೆ ಬಳ್ಳಿಯ
ಆದಿಶೇಷನ ಕೈಲಿ
ದೇವೇಂದ್ರಾಯ ಕೊಟ್ಟನು
ತಾಂಬೂಲಕೆ ಬೇಕಾದ
ಪಚ್ಚಕರ್ಪೂರ ತಿಳಿಯ ಸುಣ್ಣ
ಜಾಕಾಯಿ ಜಾಯಿಪತ್ರೆ

ಚಕ್ಕೆ ಬಾಲಮೆಣಸು
ಯಾಲಕ್ಕಿ ಲವಂಗ
ಕಾಚು ಗುಲ್ಕನ್ನುಗಳ
ಆದಿಶೇಷನ ಕೈಗೆ
ದೇವೇಂದ್ರಾಯ ಕೊಟ್ಟನು ।

ಆದಿಶೇಷನು ತಾನು
ವೀಳೆಯದ ಎಲೆಯ
ತನ್ನ ಬಾಯ ತುದಿಯಲ್ಲಿ
ಕಚ್ಚಿಕೊಂಡು ಬಂದಿತು
ಎಲೆ ತೊಟ್ಟು ಎಲೆ ತುದಿ
ನಾಗರ ಬಾಯೆಂಜಲೆಂದು
ತೊಟ್ಟು ತುದಿಗಳ ಜನರು
ಚಿವುಂಟಿ ಎಸೆಯುವರು
ನಾಗ ತಂದ ಕಾರಣದಿಂದ
ಈ ವೀಳೆಯದ ಬಳ್ಳಿಗೆ
ನಾಗವಲ್ಲಿಯೆಂದು ಹೆಸರಾಯ್ತು ।
ಬಂದಿರುವ ಜನಕೆಲ್ಲ
ಕರ್ಪೂರ ವೀಳೆಯವ ಕೊಟ್ಟು
ಎಲ್ಲರಿಗು ಧರ್ಮರಾಯ
ಸರಣು ಸರಣಂದಾರು ।

ಗಜನೋಂಪಿ ರೊತವು
ಮುಗಿದಾಗ ಐರಾವತ
ಕಾಮಜೇನು ಕಲ್ಪರುಕ್ಷ
ರಂಭೆ ಊರ್ವಶಿಯರು
ಮೇನಕೆ ತಿಲೋತ್ತಮೆ
ಅಲ್ಲದೆ – ಸುರಲೋಕದಿಂದ
ಬಂದಿರುವ ಬಗೆಬಗೆಯ
ಕಾಳುಕಡ್ಡಿಗಳು
ಸೊಪ್ಪುಸದೆಗಳು

ಹಣ್ಣುಹಂಪಲುಗಳು
ಕಾಯಿಪಲ್ಲೆಗಳ
ಹಿಂದಕ್ಕೆ ಹೊರಟು ನಿಂತೊ ।

ಅಲ್ಲಿ – ಸೇರಿದ್ದ ಜನವೆಲ್ಲ
ಅಂತೆ ಕಾಳುಕಡ್ಡಿಗಳ
ಕಾಯಿಪಲ್ಲೆಗಳ
ಸೊಪ್ಪು ಸದೆಗಳ
ಹಣ್ಣುಹಂಪಲುಗಳ
ಭೂಲೋಕದಲ್ಲು ನಾವು
ಬೆಳೆಯಬೇಕೆಂದು ಹೇಳಿ
ಬಿತ್ತನೆ ಕಾಳಿಗಾಗಿ
ಒಂದೊಂದು ಬೀಜವನು
ಆಯ್ದುಕೊಳ್ಳುತ್ತಿದ್ದರಂತೆ ।
ಆಗ ಧರ್ಮರಾಜರು
ತಾಯಿ ಕೊಂತ್ಯಮ್ಮನ ಕಂಡು
ನಾನು ಯಾವ ಕಾಳನ್ನು
ತಗ್ದುಕೊಳ್ಳಲಿ ಅಂತ
ಕೇಳಿದ ಕಾಲದಲ್ಲಿ
ಕೊಂತಮ್ಮ ತಾಯಿಯು
ಒಂದು ಅವುರೆಕಾಳ ತಗ್ದು
ಧರ್ಮರ ಕೈಗೆ ಕೊಟ್ಟು
"ಅವುರೆ ಕಾಳು ಕೇಳು ಕಂದ
ಈ ಧರೆಯಲ್ಲಿ ಇರೂವರ್ಗ
ಪಾಂಡವರು ಇರುತಾರೆ
ಅವರ ಸತ್ಯಧರ್ಮಗಳು
ಅವರ ನ್ಯಾಯನೀತಿಗಳು
ಈ ನೆಲದಲ್ಲಿ ಇರುತವೆ
ಪಾಂಡುವರು ಅವರೆ
ಪಾಂಡವರು ಅವರೆ

ಅನ್ನೋದ ಕೇಳದಕೆ
ಅವರೆಕಾಯ ಕಾಲದಲ್ಲಿ
ನಾನು ಭೂಮಿಗೆ ಬಂದು
ಕೇಳಿಕೊಂಡು ಹೋಗುತೀನಿ
ನೋಡಿಕೊಂಡು ಹೋಗುತೀನಿ
ಈ ಅವುರೆ ಕಾಳ ಕಂದ
ಜ್ಞಾಪಾನ ಮಾಡಪ್ಪ"
ಎಂದಾಳು ಕೊಂತಮ್ಮ ।

ಅದೂವರ್ಗು ಜಗದಲ್ಲಿ
ಯಾವ ಕಾಳು ಇರನಿಲ್ಲ
ಯಾವ ಕಾಯು ಇರನಿಲ್ಲ
ಯಾವ ಹಣ್ಣು ಇರನಿಲ್ಲ
ಯಾವ ಸೊಪ್ಪು ಇರನಿಲ್ಲ
ಯಾವ ಧಾನ್ಯವು ಇರನಿಲ್ಲ
ಯಾವ ದವಸ್ವು ಇರನಿಲ್ಲ
ಆಗ ತಗ್ದುಕೊಂಡಂತ
ಕಾಳುಕಡ್ಡಿ ಹಣ್ಣುಕಾಯಿ
ಸೊಪ್ಪುಸದೆ ಕಾಯಿಪಲ್ಲೆ
ದವುಸಧಾನ್ಯ ಸಕಲೆಂಟು
ಭೂಮಿಯಲ್ಲಿ ಬೆಳೆದವು ।
ಇತ್ತಲಾಗಿ ಧರ್ಮರಾಯ
ಚಿನ್ನದ ಪುಷ್ಪಮಾಲಿಕೆಯ
ಆನೆ ಕುತ್ತಿಗ್ಗೆ ಹಾಕಿ
ದೇವೇಂದ್ರಾಯನಿಗೆ
ದೊಡ್ಡ – ಉಪುಕಾರ ಮಾಡುದ್ರಿ
ನಿಮುಗೆ ಕೋಟಿ ಸರಣಾರ್ತಿ
ಎಂದು ವಾಲೆ ಬರದು
ಆನೆ ಕುತ್ತಿಗ್ಗೆ ಕಟ್ಟಿ
ಪಟ್ಟದಾನೆಗೆ ಮತ್ತೆ
ಪೂಜೆಗಳನು ಮಾಡಿ

ಸೊರುಗ ಲೋಕಕೆ ಅವರು
ಕಳಿಸಿ ಕೊಟ್ಟಾರಂತೆ ।

ಆಗ ಲೋಕವೆಲ್ಲ
ಸೊರುಗ ಲೋಕಕೆ
ಅರ್ಜುನ ದೇವನು
ಬಾಣಗಳ ಜೋಡಿಸಿ
ಮಾಡಿರುವ ಸೋಪಾನಗಳ
ಕಂಡು ಏನಂದಾರು
ದೇವಲೋಕ ನರಲೋಕ
ಯಾವ ಲೋಕದಲ್ಲೂ ಮುಕ್ಕ ೨೪೦
ಅರ್ಜುನನಂತ ಗಂಡು
ಬೇರೆ ಯಾರೂ ಇಲ್ಲಾಂತ
ಮಾತಾಡುತಿರುವಾಗ
ದೇವೇಂದ್ರಾಯ ಸ್ವಾಮಿ
“ನನ್ನ ಮಗ ಅರ್ಜುನನು
ಮೂರು ಲೋಕಕು ಗಂಡ !”
ಎಂದು ಹೆಮ್ಮೆಯಿಂದ
ಎದೆತಟ್ಟಿ ಹೇಳಿದನು । ೨೪೮

ಪಾಂಡವರು ಅವರೆ ಪರ್ವ

ಹರಹರ ಹರನೆ ಜಯತೊ – ಹರಮೂರು
ಪುರವ ಗೆದ್ದವನೆ ಜಯತೊ
ಉರಗಭೂಷಣ ಜಯತೊ ಗರಳಕಂಧರ ಜಯತೊ
ಗಿರಿಜಾಶಂಕರನೆ ಜಯತೊ । ಸೊಲ್ಲು ।

ಗಾಂಧಾರಿ ದ್ರುತುರಾಷ್ಟ್ರರು – ಕೊಂತಮ್ಮ
ವಿದುರಾನು ಸಂಜೇಯರು
ಲೋಕದಲ್ಲಿ ಕಂಡದ್ದು ಉಂಡಿದ್ದು ನೋಡಿದ್ದು
ಸಾಕು ಸಾಕೆಂದರಾಗ ।

ವನಕೆ ನಾವೊರಡಬೇಕು – ಆಶ್ರಮದ
ಜೀವನವ ನಡಸಬೇಕು
ತ್ರಪಸ ಮಾಡಲು ಬೇಕು ಮುಕುತಿ ಪಡೆಯಲು ಬೇಕು
ಪರಮಾತ್ಮನ ಕಾಣಬೇಕು ।

ಹೊರಟು ನಿಂತಾಗ ವನಕೆ – ಕೊಂತ್ಯಮ್ಮ
ಪುತ್ತುರರ ಕರೆದಳಾಗ ೧೦
ಕುಂತಲ್ಲಿ ನಿಂತಲ್ಲಿ ಕೊಂತಮ್ಮನ ಮಕ್ಕಳ
ಹೆಸರುಳಿಯಬೇಕೆಂದಳು – ಕೊಂತ್ಯಮ್ಮ
ಹೆಸುರ ಕಾಳೆರಚಿದಳು ।

ವನಕೆ ಹೋಗುವ ಹೊತ್ತಲಿ – ಕೊಂತಮ್ಮ
ಮೊಳ್ಳಿಂದ ಅವರೆಕಾಳ
ತಗುದು ಧರ್ಮರ ಕೈಗೆ ಕೊಡುತ ಅಂದಳು ಕೊಂತಿ
ಪಾಂಡವರು ಅವರೆ ಅವರೆ ।

ಪಾಂಡವರು ಅವರೆ ಅವರೆ – ಮಕ್ಕಳೆ
ಪಾಂಡವರು ಅವರೆ ಅಂತ
ಜಗತಿಳಿದುಕೊಳ್ಳಲಿ ಅವರೆ ಬಿತ್ತೀರಂತ
ಅವರೆಕಾಳನು ಕೊಟ್ಟಳು – ಕೊಂತ್ಯಮ್ಮ

ಅವರೆ ಬಿತ್ತಿರಿ ಅಂದಳು ।
"ಧರುಂರಾಯ ತರ್ಕ್ಕೊಳ್ಳಪ್ಪ ಈ ಅವರೆ ಕಾಲ್ಗಳ
ಗಜಗೌರಿರೊತ ಮಾಡುವಾಗ
ದೇವ್ಲೋಕದಿಂದ ಬಂದಿದ್ದ ಕಾಳುಗಳಲ್ಲಿ
ಈ ಅವರೆ ಕಾಳು ಪಾಂಡವರು ತಕೊಂಡಿದ್ದು
ನಾನು ಈ ನೆಲದ ಮಗಳು
ಈ ನೆಲದ ಮೇಲೆ ನ್ಯಾಯನೀತಿ ಸತ್ಯಧರ್ಮಗಳು ಇರೋನ್ಗಂಟ
ಪಾಡಂವರು ಅವರೆ ಅಂತ
ಈ ಅವುರೆಕಾಳ ನೋಡ್ಕೊಂಡು
ಜಗತ್ಯದ ಜನ ತಿಳುಕೊಳ್ಳಿ ಕಣ್ರಪ್ಪ
ಪಾಂಡವರು ಧರ್ಮಕ್ಕಾಗಿ ಹೋರಾಡ್ದೋರು ಅನ್ನುವಂತಾದ್ದಕ್ಕೆ
ಈ ಅವರೆಕಾಳು ಸಾಕ್ಷಿ ಆಗಿರಲ್ರಪ್ಪ
ನಿಮುಗೆ ಒಳ್ಳೇದಾಗಲಿ
ನಾವಿನ್ನು ಕಾಡೀಗೆ ಹೋಯ್ತಿದ್ದೀವಿ
ನಿಮ್ಮ ಹೆಸರು ಹಸುರಾಗಿರಲಿ ಕಣ್ರಪ್ಪ"
ಅಂತ್ಹೇಳಿ ಮಕ್ಕಳ್ಗೆ ಆಸುರ್ವಾದ ಮಾಡುದ್ಲು
ಗಾಂಧಾರಿ ದ್ರುತುರಾಷ್ಟ್ರ ವಿದುರ ಸೆಂಜೇಯರು
ಕೊಂತಮ್ಮನ ಕರ್ಕೊಂಡು ಕಾಡುದಾರಿ ಹಿಡುದ್ರು
ಧರುಂರಾಯ ಒಂದು ಗಳುಗೆ ಕಣ್ಮುಚ್ಚುಕೊಂಡು ನಿಂತಿದ್ದೋನು
ಆತುರುಸ್ತಂಗೆ ಕಣ್ಬುಟ್ಟು
"ಭೀಮಾರ್ಜುನರೆ ನಕುಲ ಸಾದೇವರೆ
ದ್ರೋಪತಾ ಹೊರಡಿ ಹೊರಡಿ
ನಾವು ಸೊರ್ಗಾರೋಣ ಮಾಡ್ಬೇಕು" ಅಂತ್ಹೇಳಿ
ತುದುಗಾಲಲ್ಲಿ ಹೊಂಟು ನಿಂತ್ರು –

ಪಾಂಡವರು ಸೊರ್ಗಾರೋಣ – ಮಾಡುವರು
ಅನುತ್ಹೇಳಿ ಊರ ಜನರು
ಅರಮನೆಯ ಬಾಕಲಲಿ ಬಂದು ನಿಂತಿರುವಾಗ
ಕರವೆತ್ತಿ ಕೈ ಮುಗುದರು – ಧರ್ಮರು
ಕರವೆತ್ತಿ ಕೈ ಮುಗುದರು ।

ಧರುಂರಾಯ ಕೈಯ ಮುಗುದು – ಬಂದೋರ್ಗೆಲ್ಲ
ಕೇಳೀದ ವಸ್ತೂಗಳ
ಕೇಳೀದ ವಸ್ತ್ರಗಳ ಕೇಳೀದ ವಡವೆಗಳ
ತೆಗೆತೆಗೆದು ಕೊಡುತಿದ್ದರು – ಧರ್ಮರು
ತೆಗೆತೆಗೆದು ಕೊಡುತಿದ್ದರು ।

ಮುತ್ತು ರತ್ನವ ಕೊಟ್ಟರು – ಪಾಂಡವರು
ವಜ್ರ ವೈಡೂರ್ಯ ಕೊಟ್ಟರು
ಲಗಲಾಣ್ಯ ಕೊಟ್ಟರು ಗೋವುಗಳ ಕೊಟ್ಟರು
ಬೇಕಾದುದನ್ನೆ ಕೊಟ್ಟರು – ಪಾಂಡವರು
ಕೇಳಿದುದನೆ ಕೊಟ್ಟರು ।

ಛತ್ರ ಚಾಮರ ಕೊಟ್ಟರು – ಪಾಂಡವರು
ಸತ್ತೀಗೆ ಸೂರಿಪಾನಿ
ರಥಕುದುರೆ ಆನೆಗಳ ಬೆಲೆಬಾಳೂ ವಸ್ತುಗಳ
ಕೇಳಿದವರಿಗೆ ಕೊಟ್ಟರು ।

ಹೂವೀನ ಮಳೆ ಸುರಿಯಿತು – ಆಕಾಸ್ದ
ತುಂಬೆಲ್ಲ ಹೂವಾಯಿತು
ಸಿದ್ಧರು ಸಾಧ್ಯರು ಯಕ್ಷ ಕಿನ್ನರರೆಲ್ಲ
ಹೂವುಗಳ ಮಳೆ ಕರೆದರು ।

ಹಸ್ತೀನಾಪುರವ ಬಿಟ್ಟು – ಪಾಂಡವರು
ಊರ ಬಾಕಲಿಗೆ ಬರಲು
ಹೊಲಗದ್ದೆ ತೋಟದಲಿ ಗೇಯುತಿದ್ದ ರೈತರು
ನೋಡಿ ಓಡೋಡಿ ಬಂದರು ।
"ಸ್ವಾಮಿ ನೀವು ಸೊರ್ಗಾರೋಣ ಮಾಡಕೆ ಹೊಂಟಿದ್ದೀರಿ

ಅಂತ ತಿಳೀತು
ನೀವು ಸತ್ಯವಂತರು ಧರ್ಮಾತ್ಮರು
ನ್ಯಾಯನೀತಿ ಬಲ್ಲೋರು
ನೀವು ನಮ್ಮನ್ನ ಬಿಟ್ಟು ಹೋದರೆ

ನಿಮ್ಮ ಜೊತೆ ಸತ್ಯಧರ್ಮನ ನ್ಯಾಯನೀತಿ ಒಂದೂ ಉಳೀದಂಗೆ
ಈ ಧರಣಿ ನಾಶನಾಗುವುದಿಲ್ಲವೆ ?
ನಮ್ಮುನ್ನ ಮಾತ್ರ ಬಿಟ್ಟೋಗಬೇಡಿ
ಹಂಗೆ ಹೋಗ್ಲೇ ಬೇಕೂ ಅನ್ನೋದಾದ್ರೆ
ನಮ್ಮುನ್ನು ನಿಮ್ಮ ಜೊತೆ ಕರ್‍ಕೊಂಡೋಗಿ'' ಅಂದ್ರು
"ಅಪ್ಪಾ ಒಕ್ಕಲಿಗರೇ
ತಾಯಿ ಕೊಂತಮ್ಮ ಈ ನೆಲದ ಮಗಳು
ತಂದೆ ಪಾಂಡುರಾಜ ಈ ನಾಡಿನ ರಾಜ
ಅಂತಾವುರ ಮಕ್ಕಳಾದ ನಾವು
ಸೊರ್ಗಾರೋಣ ಮಾಡ್ದೆ ಉಳಿಯೋಂಗಿಲ್ಲ
ನಾವು ಸೊರ್ಗಾರೋಣ ಮಾಡುದ್ರೂ
ಎಂದೆಂದ್ಗೂ ನಿಮ್ಮ ಜೊತೇಲಿದ್ದೇ ಇರ್ತೀವಪ್ಪ
ಅದು ಹೆಂಗೇ ಅಂದ್ರೆ
ನೋಡಿ ನಮ್ಮ ತಾಯಿ ಕೊಂತಮ್ಮ
ಗಜಗೌರಿ ರೊತ ಮಾಡಿದಂತ ಸಮಯದಲ್ಲಿ
ದೇವುಲೋಕದಿಂದ ಬಂದ ದವಸ ಧಾನ್ಯಗಳಲ್ಲಿ
ಅವುರೆ ಕಾಳ್ಗಳ ತಗ್ದು ಮಡೀಕೊಂಡಿದ್ರು
ಆ ಅವುರೆ ಕಾಳ್ಗಳ ಕೊಟ್ಟವುರೆ
ನೀವು ಸಾಲೊಡ್ಕೊಂಡೋದ್ರೆ
ನಾವು ಅವುರೇ ಕಾಳ ಬಿತ್ತುತೀನಿ
ಈ ಅವುರೇ ಕಾಳಿನ ಕಾರ್‍ಣದಿಂದ
ಎಲ್ಲೀವರೆಗೆ ಈ ತಾಯಿ ನೆಲದಲ್ಲಿ
ಸತ್ಯ ಧರ್ಮ ನ್ಯಾಯ ನೀತಿ ಇರ್ತದೊ
ಅಲ್ಲೀನ್ಗಂಟ ಪಾಂಡವರು ಅವರೆ ಅಂತ ತಿಳ್ಕೊಳ್ರಪ್ಪ
ನಡೀರಿ ನೀವು ಉತ್ಕೊಂಡೋಗಿ
ನಾವು ಬಿತ್ಕೊಂಡೋಯ್ತೀನಿ'' ಅಂತ್ಹೇಳಿ
ಧರ್ಮರಾಯರು ಅವುರೇಕಾಳನ್ನು ಬಿತ್ಕೊಂಡೋಯ್ತಿದ್ದಾರೆ–

ಅವರೇಯ ಬಿತ್ತಿದರು – ಪಾಂಡವರು
ಅವರೆ ಅಂತ ಸಾರಿದರು

ಅವುರೇಯ ಗಿಡ ಚಿಗಿತು ಹೂಕಚ್ಚಿ ನಗುವಾಗ
ಪಾಂಡವರ ಹೆಸರಾಯಿತು – ಜಗತ್ಯದಲಿ
ಪಾಂಡವರ ಹೆಸರಾಯಿತು ।
ರೈತರೆಲ್ಲ ಹೇಳ್ತಿದ್ದಾರೆ :
“ಕೊಂತಮ್ಮ ತಾಯಿ ನೀನು ಕೊಟ್ಟಂಥ ಈ ಅವರೆಕಾಳು
ಹೂಕಚ್ಚಿ ಫಲಫಲಾ ಅಂತಾ ಅದೆ
ಇದು ಕಾರ್ತೀಕಮಾಸ ನನ್ನವ್ವ
ಪ್ರತೀ ಕಾರ್ತೀಕ
ದಲ್ಲೂ ಈ ಅವರೇಗಿಡ ಹೂಕಚ್ಚಿದಾಗ
ನಿನ್ನ–ನಿನ್ನ ಮಕ್ಳ ಸೊರಣೆ ಮಾಡಿ
ಕೊಂತಮ್ಮನ ಪೂಜೆ ಅಂತ್ಹೇಳಿ
ನಿನ್ನ ಪೂಜೆ ಮಾಡ್ತೀವಮ್ಮ” ಅಂದ್ರು–
ಇತ್ಲಾಕಡೆ ಯಮಲೋಕದ ನರಕದಲ್ಲಿ
ಶಕುನೀನೂ ದುರ್ಯೋದನನೂ
ಒಂದೇ ಒಂದು ಎಳೆ ನೂಲುನ ತಂತೀಲಿ ನ್ಯಾತಾಡ್ತಾ ಅವರೆ
ಅವುರು ನ್ಯಾತಾಡ್ತಾ ಅವುರಲ್ಲ
ಅದರ ಕೆಳಗೆ ಮಲಮೂತ್ರದ ಗುಂಡಿ ಅದೆ
ಆ ಒಂದು ಎಳೆ ದಾರದಷ್ಟು ಪುಣ್ಯ ಅವುರ್ಕೆ ಉಳುದದೆ
ಹಿಂಗೆ ನ್ಯಾತಾಡ್ತಾ ಇರೋಗ ಶಕುನಿ
ದುರ್ಯೋದನನ್ನು ನೋಡಿ
ಇವನಿಗೆ ಇನ್ನೂ ತಕ್ಕನಾದ ಶಾಸ್ತಿ ಮಾಡಿಬೇಕೂಂತ್ಹೇಳಿ
“ವಸ್ತ ದುರ್ಯೋದ
ನೀನು ಎಷ್ಟು ಹೋರಾಡಿ ಮಾಡಿ ಏನು ಬಂತು ?
ಎಷ್ಟು ಛಲ ಮಾಡಿ ಏನು ಬಂತು ?
ಅಲ್ನೋಡು ಭೂಮೀಲಿ ಧರುಂರಾಯ
ಪಾಂಡವರು ‘ಅವರೆ’ ಅಂತ ಅವರೇಕಾಳ ಬಿತ್ಕೊಂಡು ಬರ್ತಿದ್ದಾನೆ
ಪಾಂಡವರು ಅವರೆ ಅಂದ್ರೆ ಕೌರವರು ಇಲ್ಲ ಅಂತಲ್ಲವ ?
ಹೇಳು ವಸ್ತ ಕೌರವ !”
“ಮಾವ ನಿಜ ನಾನು ಕೌರವ

ಧರ್ಮರಾಯ ಬಿತ್ಕೊಂಡು ಬರೋ ಅವರೇ ಗಿಡದ ಕಾಯ್ಗಳನೆಲ್ಲ
ನಾನು ಕವರೂವ ನಾನು ಕೌರವ
ಈಗ ನನ್ನ ಶಕ್ತಿ ಸಾಹಸಗಳ ನೋಡು
ಈಗ ನೋಡು ನಾನು ಚಿಟ್ಟೆಮಳೆ ಹುಯ್ಯಿಸ್ತೀನಿ
ಧರ್ಮರಾಯನ ಅವರೇಗಿಡಗಳ್ಗೆಲ್ಲ
ಹಸುರ್ಹುಳ ಕಂಬ್ಳಿಹುಳ ಚಿಟ್ಟೆ ಹುಳಹುಪ್ಪಿಗಳ ಉತ್ಪತ್ತಿ ಮಾಡ್ತಿದ್ದೀನಿ
ಗಿಡಗಳ್ನೆಲ್ಲ ಪುಟ್ಟುಗೆ ಹಾಳ್ಮಾಡ್ತೀನಿ
ಕಾಳ್ಗೊಳ್ನೆಲ್ಲ ನುಣ್ಣುಗೆ ಕವುರ್ಕೋತೀನಿ
ಹ್ಯಾಗಿದೆ ಮಾವ ನನ್ನ ತಂತು ?"
"ವಸ್ತ ನಿನ್ನ ಮಾತೇ ಮಾತು
ನಿನ್ನ ಭಲವೇ ಭಲ
ನಡೀಲಿ ನಡೀಲಿ ನರಕದಲ್ಲೂ ನಿನ್ನ ದರಬಾರು !" –

ನರಕದ ಕೂಪದಲ್ಲಿ – ಕೌರವ
ಧರೆಗೆ ಮೊಕ ಮಾಡಿದನು
ಪಾಂಡವರು ಅವರೇಂತ ಅವರೆಗಿಡವಾಯ್ತೆಂದು
ಕಟಕಟನೆ ಹಲ್ಲ ಕಡಿದು – ಕೌರವ
ಕಟಕಟನೆ ಹಲ್ಲ ಕಡಿದು ।

"ಅವರೆಗಿಡ ಉಳಿಯದಂತೆ – ಪಾಂಡವರ
ಹೆಸರುಗಳು ಉಳಿಯದಂತೆ
ಚಿಟ್ಟೇಯ ಮಳೆಹೂದು ಚಿಟ್ಟೇಹುಳು ಆಗಿ
ಅವರೆಗಳ ನಾಶಮಾಡುವೆ – ನಾನಾದರೆ
ಅವರೆಗಳ ನಾಶ ಮಾಡುವೆ" ।

ಮಾವ ಒಪ್ಗೆ ಕೊಟ್ಟ ಅಂತ್ಹೇಳಿ
ಚಿಟ್ಟೆ ಮಳೆ ಹುಯ್ಸಕೆ ಸುರುಮಾಡ್ದ
ಹೂಕಚ್ಚಿ ಚೊಟ್ಟಾಗಿ ಕಾಯಾಗಿರೋ
ಅವರೆ ಗಿಡಗಳಿಗೆಲ್ಲ ಹಸ್ರುಳ ಕಂಬ್ಳೀಹುಳ
ಚಿಟ್ಟೆಹುಳ ಹುಳುಹುಪ್ಪಿಗಳು ಮುತ್ಕೊಂಡು
ಕಾಯ್ಗಳ್ನೆಲ್ಲ ಕವುರ್ಕೊತಾ ಅವೆ.

ಇದೇನು ಹಿಂಗಾಯ್ತಲ್ಲ ಅಂತ
ಧರುಂರಾಯ್ರುಗೆ ಐಚೋಜುಗವಾಯ್ತು
ಕತ್ತೆತ್ತಿ ಮೇಲುಕ್ಕೆ ನೋಡುದ್ರು
ದುರ್ಯೋದ ಕೇಕೆ ಹಾಕೊಂಡು ನೆಗ್ತಾ
ಚಿಟ್ಟೆ ಮಳೆ ಹುಯಿಸ್ತಾ ಇದ್ದಾನೆ.
ಆಗ ಧರುಂರಾಯ
"ವಸ್ತ ನರುಕುಕ್ಕೋದ್ರೂ ನಿನ್ನ ನೀಚ ಬುದ್ಧಿ ಬಿಡ್ನಿಲ್ಲವಲ್ಲ ಇರ್ಲಿ –

ಎಲೋ ಎಲೋ ಕರ್ಮಾತ್ಮನೆ – ಛೀ ಕೌರವ
ನೀನು – ಚಿಟ್ಟೆಹುಳ ಆಗಿ ಸುರಿದರೆ
ವಿಷಾತಿ ಮಳೆಹೂದು ಚಿಟ್ಟೆ ಹುಳ ಸಾಯಿಸುವೆ
ತಿರುಕೊಪ್ಪ ಮನಸಿನಲ್ಲಿ – ತಮ್ಮಯ್ಯ
ತಿಳುಕೊಪ್ಪ ಮನಸಿನಲ್ಲಿ"।
ಪರಮಾತ್ಮನ ಹೆಸ್ರೇಳಿ ಧರುಂರಾಯ್ರು
ವಿಷಾತಿ ಮಳೆ ಹೊಯಿಸ್ತು
ಆಗ ಇದ್ದಬದ್ದ ಹಸ್ರುಳ ಕಂಬ್ಳಿಹುಳ ಚಿಟ್ಟೆ ಹುಳ ಹುಳು ಹುಪ್ಪಿಗಳೆಲ್ಲ
ಮರೆಯಾಗಿ ಹೋದೋ
ಇತ್ಲಾಕಡೆ ನರಕದಲ್ಲಿ ಇದ್ದಂತ ದುರ್‍ಯೋದ್ನ
ಇದ್ದ ಒಂದು ಚೂರು ಪುಣ್ಯವೂ ತೀರೋಗಿ
ದಾರ ಕಿತ್ತು ಅವ್ನು ಮಲಮೂತ್ರದ ಗುಂಡಿಗೆ ಬಿದ್ದೋದ
ಅದ ನೋಡಿ ಶಕುನಿ
'ಓಹ್ಹೊಹ್ಹೊ' ಅಂತ್ಹೇಳಿ ಅಬ್ರುಸ್ಕೊಂಡು ನೆಗತಾ ಅವ್ನೆ
"ದುರ್ಯೋ, ನೀನು ಕರ್ಣುಂಗೆ ಉಪಕಾರ ಮಾಡಿದ್ದಷ್ಟೇ ನಿನ್ನ ಪುಣ್ಯ
ಅದೂ ಮುಗುದೋಗಿ ಈಗ ನೀನು
ಮಲಮೂತ್ರದ ಗುಂಡೀಲಿ ಒದ್ದಾಡ್ತ ಇರೋದ
ನೋಡಿ ನನುಗೆ ಬಾಳ ಆನಂದವಾಯತು
ನಿಂಗೆ ಹಿಂಗಾಗ್ಬೇಕು ಅಂತ್ಲೆ ನಾನು ತಂತು ಮಾಡ್ದೆ"
ಅಂತ್ಹೇಳಿ ಕೈತಪ್ಪಾಲೆ ತಟ್ಕೊಂಡು ನೆಗ್ತಾ ಅವ್ನೆ.
ದುರ್ಯೋದ ಕ್ರೋಪದಿಂದ ಬುಸ್ಕರೀತಾ ಅವುನೆ
"ದುರ್ಯೋದ ನೀನು ನಿನ್ನ ನೀಚ ಅಂತಿದ್ದೀಯೆ

ನಾನಲ್ಲ ನೀಚ ನೀನು !
ನನ್ನ ಸೋದರರನ್ನೆಲ್ಲ ನಾಶನ ಮಾಡಿದ್ಕೆ
ಇದು ನನ್ನ ಸೇಡು
ಈಗ ನನಗೆ ನೆಮ್ಮದಿ ಆಯ್ತು.
ನಿನ್ನ ಎಕ್ಕುಟ್ಸಿ ಕೆಟ್ಟು ಕೆರಾ ಹಿಡಿಯೋಂಗೆ ಈ ದಿನ ಮಾಡಿದ್ದೀನಿ
ನನ್ನ ಅಣ್ಣಂದಿರ ಆತ್ಮಕ್ಕೆ ಸಾಂತಿ ಸಿಕ್ತು
ಇವತ್ತು ಸಾಂತಿ ಸಿಕ್ತು
ಯಾಕೆ ಹಂಗೆ ಕೆಕ್ಕುರುಸ್ಕೊಂಡು ನೋಡ್ತೀಯೆ ?
ಈಗ ನೀನು ನನ್ನ ಏನೂ ಮಾಡ್ಲಾರಿ
ಅದಿರ್ಲಿ ನೀನು ಆ ಗುಂಡಿಯಿಂದ
ಮೇಲುಕ್ಕೆ ಬರ್ಬೇಕಾ ಬೇಡವ ?"
ದುರ್ಯೋದ ಹಲ್‌ಹಲ್ ಕಡೀತ "ಬರ್ಬೇಕು" ಅಂದ
"ಹಂಗಾದ್ಮೇಕೆ ನಾನು ಹೇಳುದಂಗೆ ಹೇಳುದ್ರೆ
ತಿರ್ಗಾ ಪುಣ್ಯ ಪ್ರಾಪ್ತವಾಗಿ
ನೀನು ಮೇಲುಕ್ಕೆ ಬರ್ತೀಯೆ"
"ಅದೇನೂಂತ ಹೇಳು !"
"ಅದು ಇದು ಹೇಳು –

    ಪಾಂಡವರ ಸತ್ಯವಾದರೆ – ಲೋಕದಲಿ
ಸ್ಥಿರಂಜಿಯಾಗಿ ನಿಲ್ಲಲಿ
ಪಾಂಡವರು ಅವರೇಂತ ಅವರೆಗಿಡ ನೋಡಿಕೊಂಡು
ಸತ್ಯವಂತರಾಗಿ ಬಾಳಲಿ – ಜನವೆಲ್ಲ
ಸತ್ಯವಂತರಾಗಿ ಬಾಳಲಿ "।
ಶಕುನಿ ಹೇಳ್ತಾ ಇದ್ರೆ ದುರ್ಯೋದ ಹಲ್‌ಹಲ್ ಕಡೀತವುನೆ
"ಅಪ್ಪಾ ಮಾರಾಜ ಕೇಳುದ್ರೆ ಕೇಳು, ಬುಟ್ರೆ ಬುಡು
ನಾನೇನೊ ನೀನು ಮ್ಯಾಲುಕ್ಕೆ ಬರ್ಲಿ ಅಂತ ಹಂಗೆ ಹೇಳ್ದೆ
ಬ್ಯಾಡಾ ಅನ್ನೋದಾದ್ರೆ ಅಲ್ಲೇ ಇರು !"
ದುರ್ಯೋದ ಶಕುನಿಯ ಮನುಸ್ನಲ್ಲೆ ಬೋಯ್ತ ಅವನೆ ಹೊರುಕ್ಕೆ
ಬರ್ನೇಬೇಕಲ್ಲ
"ಮಾವ ಅದೇನು ಹೇಳು ಹೇಳ್ತೀನಿ"

"ಆಗ್ಲೆ ಹೇಳಿದ್ರೆ ಏನಾಯ್ತಿತ್ತಪ್ಪ
ಹೋಗ್ಲಿ ಹೇಳು –

ಪಾಂಡವರ ಸತ್ಯವಾದರೆ – ಲೋಕದಲಿ
ಸ್ಥಿರಂಜಿಯಾಗಿ ನಿಲ್ಲಲಿ
ಪಾಂಡವರು ಅವರೇಂತ ಅವರೆಗಿಡ ನೋಡಿಕೊಂಡು
ಸತ್ಯವಂತರಾಗಿ ಬಾಳಲಿ – ಜನವೆಲ್ಲ
ಸತ್ಯವಂತರಾಗಿ ಬಾಳಲಿ"।
ಶಕುನಿ ಹೇಳ್ಕೊಟ್ಟಂಗೆ ದುರ್ಯೋದ ಹೇಳ್ದ
ಆಗ ದುರ್ಯೋದುಂಗೆ ಪುಣ್ಯ ಪ್ರಾಪ್ತಿಯಾಗಿ
ಮಲಮೂತ್ರದ ಗುಂಡಿಯಿಂದ ಮೇಲುಕ್ಕೆ ಬಂದ
ಮೇಲಕ್ಕೆ ಬಂದಿದ್ರೂವೆ ಕ್ರೋಪ ಅಂದ್ರೆ ಅಂತಿಂತೆ ಕ್ರೋಪುವಲ್ಲ
ರಾಕ್ಷಕ್ರೋಪ ಬಂದು
ದಢದಢನೆ ಬಂದು ಶಕುನಿಯ ಝಾಡ್ಸಿ ಒದ್ದ
ಆ ಕೂಡಲೆ ಶಕುನಿ ನರಕದಿಂದ ಭೂಮಿಗೆ ಧೊಪ್ಪನೆ ಬಿದ್ದ
ಅವತ್ತಿನಿಂದ ಭೂಮಿ ಮೇಲೆ ಶಕುನಿ ಸಂತಾನ ಹೆಂಗೋ ಉಳುಕೊಂಡದೆ
ಕಲಿಂಗ ಕಳಿಯೋನ್ತನಕ
ಶಕುನಿ ಸಂತಾನ ಇದ್ದೇ ಇರ್ತದೆ.
ಶಕುನಿ ಬಿದ್ದ ಸ್ಥಳುವೆ ಈವತ್ತುನ
ಶಕುನೀ ಪುರ* ಅಂತಾಗದೆ
ಧರುಂರಾಯ್ರು ರೈತಬಾಂಧವರಿಗೆ ಕರವೆತ್ತಿ ಕೈಮುಗುದು
"ಅಪ್ಪಾ ಪ್ರಜೆಗಳೇ
ಅಣ್ಣತಮ್ಮದೀರು ಜಗಳ ಆಡ್ಬೇಡಿ
ತಂದೆ ತಾಯ್ಗಳ ನೋಯುಸ್ಬೇಡಿ
ಗುರುಹಿರಿಯರ ಮಾತ ದಿಕ್ಕರಿಸ್ಬೇಡಿ
ಸತ್ಯವನ್ನು ಬಿಡದೆ ಧರ್ಮವನ್ನು ಮರೀದೆ
ನ್ಯಾಯನೀತಿಯಿಂದ ನಡುದು
ಸುಖಶಾಂತಿ ಸಂತೃಪ್ತಿಯಿಂದ ಬಾಳ್ರಪ್ಪ
ನಿಮುಗೆಲ್ಲ ಪರಮಾತ್ಮ ಒಳ್ಳೇದು ಮಾಡ್ಲಿ" ಅಂತ್ಹೇಳಿ –
ಎಲ್ಲರಿಗೂ ಕೈಯಮುಗುದು – ಪಾಂಡವರು

ಅಲ್ಲಿಂದ ಮುಂದುಕೊರಟರು
ಶ್ರೀ ಕ್ರಿಷ್ಣ ಪರಮಾತ್ಮ ನೀನೇ ಗತಿಯೆಂದು
ಮುಂದು ಮುಂದಕೆ ನಡೆದರು – ಪಾಂಡವರು ೨೫೦
ಮುಂದು ಮುಂದಕೆ ನಡೆದರು । ೨೫೧

---

* ಶಕುನಿಪುರವು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿದೆ. ಪೂರ್ವದಲ್ಲಿ ಶಕುನಿಪುರ ಹೆಸರಿದ್ದ ಈ ಊರು ಮಧ್ಯಕಾಲದಲ್ಲಿ ಕಲ್ಲುನಾಥಪುರ ಎಂಬ ಹೆಸರಿನಿಂದ ಕರೆಯಲಾಗಿತ್ತು. ರೆಕಾರ್ಡ್‌ಗಳಲ್ಲಿ ಈ ಊರಿನ ಹೆಸರು ಹುಸೇನ್‌ಪುರ ಎಂದಿದೆ. ಇದು ಆಯರಹಳ್ಳಿಯ ಪಕ್ಕದಲ್ಲಿದೆ.

ಚುಂಚನಗಿರಿ ಭೈರವ

ಎಲ್ಲವನೋ ಶಿವನೆಲ್ಲವನೋ
ಸ್ವಾಮೆಲ್ಲವನೋ ಗುರುವೆಲ್ಲವನೋ ॥ ಸೊಲ್ಲು ॥
ಅಲ್ಲಾವನಿಲ್ಲವನೆಲ್ಲವನೋ
ಸ್ವಾಮೆಲ್ಲವನೋ ಗುರುವೆಲ್ಲವನೋ ॥ ನಡೆ ಸೊಲ್ಲು ॥
ಅನ್ನದಾನಿ ಸಿದ್ಧ ಎಲ್ಲವನೋ
ಒಳ್ಳೆ ಆದಿಚುಂಚನಗಿರಿ ಎಲ್ಲವನೋ ।
ಅರೆ ಮೇಲೆ ಅನ್ನದಾನಿ ಎಲ್ಲವನೋ
ಒಳ್ಳೆ ಗಿರಿ ಮೇಲೆ ಭೆರುವ ಎಲ್ಲವನೋ ।
ಕೋಡುಗಲ್ಲಿನ ಒಡೆಯ ಎಲ್ಲವನೋ
ಖಂಡ್ಗ ವೀಭೂತಿ ಧರಿಸೋನು ಎಲ್ಲವನೋ ।
ಮೂರು ಶೂಲದ ಒಡೆಯ ಎಲ್ಲವನೋ
ಚೇಣೂರ ಕಂಬದಯ್ಯ ಎಲ್ಲವನೋ ।
ಮರುಗ ಮಲ್ಲಿಗೆ ಜಾಜಿ ಎಲ್ಲವನೋ
ಒಳ್ಳೆ ನವಿಲುಗರಿ ಕಂತೆ ಎಲ್ಲವನೋ ।
ಮುಕ್ಕಣ್ಣ ಮೂರುತಿ ಎಲ್ಲವನೋ
ಒಳ್ಳೆ ಸರ್ಪಭೂಷಣ ಶಿವನೆಲ್ಲವನೋ ॥

ಡಾ. ಪಿ. ಕೆ. ರಾಜಶೇಖರ
ಗಂಧಾದ ಗವುಲೆದ್ದವೋ

ಲಿಂಗಾಷ್ಟಕಂ

ಬ್ರಹ್ಮ ಮುರಾರಿಸುರಾರ್ಚಿತ ಲಿಂಗಂ
ನಿರ್ಮಲಭಾಸಿತ ಶೋಭಿತ ಲಿಂಗಮ್ ।
ಜನ್ಮಜ ದುಃಖ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ ।

ದೇವ ಮುನಿ ಪ್ರವರಾರ್ಚಿತ ಲಿಂಗಂ
ಕಾಮದಹನ ಕರುಣಾಕರ ಲಿಂಗಮ್ ।
ರಾವಣದರ್ಪ ವಿನಾಶಕಲಿಂಗಂ
ತತ್ಪ್ರಣಮಾಮಿ ಸದಾಶಿವಲಿಂಗಮ್ ।

ಸರ್ವಸುಗಂಧಿಸುಲೇಪಿತ ಲಿಂಗಂ
ಬುದ್ಧಿ ವಿವರ್ಧನ ಕಾರಣಲಿಂಗಮ್ ।
ಸಿದ್ಧಸುರಾಸುರ ವಂದಿತ ಲಿಂಗಂ ।
ತತ್ಪ್ರಣಮಾಮಿ ಸದಾಶಿವ ಲಿಂಗಮ್ ।

ಕನಕ ಮಹಾಮಣಿ ಭೂಷಿತ ಲಿಂಗಂ
ಫಣಿ ಪತಿವೇಷ್ಟಿತ ಶೋಭಿತ ಲಿಂಗಮ್ ।
ದಕ್ಷಸುಯಜ್ಞ ವಿನಾಶನಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ ।

ಕುಂಕುಮ ಚಂದನ ಲೇಪಿತಲಿಂಗಂ
ಪಂಕಜ ಹಾರಸುಶೋಭಿತ ಲಿಂಗಮ್ ।
ಸಂಚಿತ ಪಾಪ ವಿನಾಶನಲಿಂಗಂ
ತತ್ಪ್ರಣಮಾಮಿ ಸದಾಶಿವಲಿಂಗಮ್ ।

ದೇವಗಣಾರ್ಚಿತ ಸೇವಿತ ಲಿಂಗಂ
ಭಾವೈರ್ಭಕ್ತಿ ಭಿರೇವ ಚ ಲಿಂಗಮ್ ।
ದಿನಕರ ಕೋಟಿ ಪ್ರಭಾಕರ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ ।

ಅಷ್ಟದ ಲೋಪರಿವೇಷ್ಟಿತ ಲಿಂಗಂ
ಸರ್ವಸಮುದ್ಭವ ಕಾರಣ ಲಿಂಗಮ್ ।
ಅಷ್ಟ ದರಿದ್ರ ವಿನಾಶಿತ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್ ।

ಸುರಗುರು ಸುರವರ ಪೂಜಿತಲಿಂಗಂ
ಸುರವನ ಪುಷ್ಪ ಸದಾರ್ಚಿತ ಲಿಂಗಮ್
ಪರಾತ್ಪರಂ ಪರಮಾತ್ಮಕಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಮ್

ಶ್ರೀ ಶಂಕರಾಚಾರ್ಯರು

ದೇವೀಸ್ತುತಿಃ

ಓಂ ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ
ಶರಣ್ಯೇ ತ್ರಂಬಕೇ ಗೌರಿ ನಾರಾಯಣಿ ನಮೋಸ್ತುತೇ ।
ಸೃಷ್ಟೆ ಸ್ಥಿತಿ ವಿನಾಶಾನಾಂ ಶಕ್ತಿಭೂತೇ ಸನಾತನಿ
ಗುಣಾಶ್ರಯೇ ಗುಣಮಯಿ ನಾರಾಯಣಿ ನಮೋಸ್ತುತೇ ।
ಶರಣಾಗತ ದೀನಾರ್ತ ಪರಿತ್ರಾಣ ಪರಾಯಣೇ
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಸ್ತುತೇ ।

ಶ್ರೀ ಶಂಕರಾಚಾರ್ಯರು

ಚಾಮುಂಡಿ

ಒಲಿದು ಬಾರಮ್ಮಯ್ಯ ಒಲಿದು ಬಾರೆ ಚಾಮುಂಡಿ
ಬೆಟ್ಟದ ಚಾಮುಂಡಿ ಒಲಿದು ಬಾರೆ ಚಾಮುಂಡಿ
ಮೈಸಾಸುರನ ಕೊಂದು ಮೈಸೂರಿನಲಿ ನಿಂತ ಚಾಮುಂಡಿ
ಬೆಟ್ಟದ ಬೆಡಗಿ ಬಾರೆ । ಸೊಲ್ಲು ।

ಆಯಾ ಉಳ್ಳೋಳು ನೀನು ಚಾಮುಂಡಿ
ಚಾಯಾ ಉಳ್ಳೋಳು ನೀನು ಚಾಮುಂಡಿ
ಆಯಾಚಾಯಾವುಳ್ಳ ಮಾಯಕಾತಿ ಚಾಮುಂಡಿ
ದಯ ಮಾಡೋಲಿದು ಬಾರೆ ಚಾಮುಂಡಿ ।

ಅಕ್ಕಯ್ಯ ಅಕ್ಕ ಬಾರೆ ಚಾಮುಂಡಿ
ಅಕ್ಕರೆಯ ಗೊಂಬೆ ಬಾರೆ ಚಾಮುಂಡಿ
ಅಕ್ಕ ಹಿರಿದೇವತೆ ಪಿರಿಯಾಪಟ್ಟಣದವಳ
ಚಿಕ್ಕ ತಂಗ್ಯಮ್ಮ ಬಾರೆ । ಚಾಮುಂಡಿ ।

ಕರಮುಗಿದು ಶರಣೆಂದೆವು ಚಾಮುಂಡಿ
ವರಗಳನು ಪಾಲಿಸಮ್ಮ ಚಾಮುಂಡಿ
ಮೈಸೂರು ಅರಸರ ಮನೆದೇವಿ ಚಾಮುಂಡಿ
ಜೈಸುವರ ಪಾಲಿಸಮ್ಮ ಚಾಮುಂಡಿ ।

ಡಾ. ಪಿ. ಕೆ. ರಾಜಶೇಖರ
ಗಂಧಾದಗವುಲೆದ್ದವೋ

ಸತ್ಯವಂತ ಪಾಂಡವರು

ಗಂಧಾದ ಗೆಲುವಾರು ಚೆಂದಾದ ಚೆಲುವಾರು
ಏ ಗಿಣೇಗಿಣೆಯೇ
ಸಿರಿಗಂಧಾದ ಸಿರಿಗನ್ನೆ ಮರದ ಕುಡಿಯೇ
ಏ ಗಿಣೇಗಿಣೆಯೇ । ಸೊಲ್ಲು ।

ಕೊಂತಮ್ಮ ತಾಯಿ ಚಿಂತೆ ಯಾಕೆ ಮಾಡುತೀಯೆ
ಪಂಥಾಕೆ ನಿಂತವುರೆ ನಿನಮಕ್ಕ ಐವಾರು
ಎಂಥ ಧೀರರೆ ಪಾಂಡುವರು ।
ಮುತ್ತಿನಂಥ ಸೊಸೆ ಸತ್ಯವಂತೆ ದ್ರೋಪತಿ
ಉತ್ತಮರು ಮಗಳು ಉರಿಯದೇವಿ ಅವಳು
ಸತ್ಯವಂತೆ ಕಾಣೆ ನಿನ್ನ ಸೊಸೆ ।
ಕೆಂಡದುಂಡೆಯ ಚೆಂಡಾಡಿ ಬಂದಾಳೆ
ಗಂಡಕಾತಿ ಚಂಡಿ ಚಾಮುಂಡಮ್ಮ ದ್ರೋಪತಿ
ಪುಂಡು ಕೌರವನ ತುಣುದಾಳೆ ।
ವನ್ನೀರ ಮಗಳು ಕನ್ನೆ ದ್ರೋಪತ ದೇವಿ
ಲೆತ್ತ ಪಗಡೇಯ ಆಡಿ ಗೆದ್ದಾಳು
ಪಗಡೆಯನಾಡಿ ಪತಿಗಳ ಗೆದ್ದಾಳು
ಅವ್ವು ಮಾನವಳಲ್ಲ ಮಾಯಕಾತಿ ।

ಸತ್ಯವಂತ ಪಾಂಡವರು ಸತ್ತರೆಂದೆನ ಬೇಡಿ
ಸತ್ತರೆ ಈ ಲೋಕ ಉಳಿಯಾವು ಪಾಂಡವರು
ಬಿತ್ತಿ ಹೋಗುವರೆ ಅವರೇಯ ।

ಡಾ. ಪಿ. ಕೆ. ರಾಜಶೇಖರ
ಗಾಂಧಾರ ಗವುಲೆತ್ತವೋ

ಶುದ್ಧ ಬ್ರಹ್ಮ ಪರಾತ್ಪರ ರಾಮ

ರಘುಪತಿರಾಘವ ರಾಜಾರಾಮ
ಪತಿತಪಾವನ ಸೀತಾರಾಮ

ಬಾಲಕಾಂಡಮ್

೧ ಶುದ್ಧಬ್ರಹ್ಮಪರಾತ್ಪರ ರಾಮ
೨ ಕಾಲಾತ್ಮಕಪರಮೇಶ್ವರ ರಾಮ
೩ ಶೇಷತಲ್ಪಸುಖನಿದ್ರಿತ ರಾಮ
೪ ಬ್ರಹ್ಮಾದ್ಯಮರಪ್ರಾರ್ಥಿತ ರಾಮ
೫ ಚಂಡಕಿರಣಕುಲಮಂಡನ ರಾಮ
೬ ಶ್ರೀಮದ್ದಶರಥನಂದನ ರಾಮ
೭ ಕೌಸಲ್ಯಾಸುಖವರ್ಧನ ರಾಮ
೮ ವಿಶ್ವಾಮಿತ್ರಪ್ರಿಯಧನ ರಾಮ
೯ ಘೋರತಾಟಕಾಘಾತಕ ರಾಮ
೧೦ ಮಾರೀಚಾದಿನಿಪಾತಕ ರಾಮ
೧೧ ಕೌಶಿಕಮಖಸಂರಕ್ಷಕ ರಾಮ
೧೨ ಶ್ರೀಮದಹಲ್ಯೋದ್ಧಾರಕ ರಾಮ
೧೩ ಗೌತಮಮುನಿಸಂಪೂಜಿತ ರಾಮ
೧೪ ಸುರಮುನಿವರಗಣಸಂಸ್ತುತ ರಾಮ
೧೫ ನಾವಿಕಧಾವಿತಮೃದುಪದ ರಾಮ
೧೬ ಮಿಥಿಲಾಪುರಜನಮೋಹಕ ರಾಮ
೧೭ ವಿದೇಹಮಾನಸರಂಜಕ ರಾಮ
೧೮ ತ್ರ್ಯಂಬಕಕಾರ್ಮುಕಭಂಜಕ ರಾಮ
೧೯ ಸೀತಾರ್ಪಿತವರಮಾಲಿಕ ರಾಮ
೨೦ ಕೃತವೈವಾಹಿಕಕೌತುಕ ರಾಮ
೨೧ ಭಾರ್ಗವದರ್ಪವಿನಾಶಕ ರಾಮ
೨೨ ಶ್ರೀಮದಯೋಧ್ಯಾಪಾಲಕ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಅಯೋಧ್ಯಾಕಾಂಡಮ್

೨೩ ಅಗಣಿತಗುಣಗಣಭೂಷಿತ ರಾಮ
೨೪ ಅವನೀತನಯಾಕಾಮಿತ ರಾಮ
೨೫ ರಾಕಾಚಂದ್ರಸಮಾನನ ರಾಮ
೨೬ ಪಿತೃವಾಕ್ಯಾಶ್ರಿತಕಾನನ ರಾಮ
೨೭ ಪ್ರಿಯಗುಹವಿನಿವೇದಿತಪದ ರಾಮ
೨೮ ತತ್‌ಕ್ಷಾಲಿತನಿಜಮೃದುಪದ ರಾಮ
೨೯ ಭರದ್ವಾಜಮುಖಾನಂದಕ ರಾಮ
೩೦ ಚಿತ್ರಕೂಟಾದ್ರಿನಿಕೇತನ ರಾಮ
೩೧ ದಶರಥಸಂತತಚಿಂತಿತ ರಾಮ
೩೨ ಕೈಕೇಯೀತನಯಾರ್ಥಿತ ರಾಮ
೩೩ ವಿರಚಿತನಿಜಪಿತೃಕರ್ಮಕ ರಾಮ
೩೪ ಭರತಾರ್ಪಿತನಿಜಪಾದುಕ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಅರಣ್ಯಕಾಂಡಮ್

೩೫ ದಂಡಕಾವನಜನಪಾವನ ರಾಮ
೩೬ ದುಷ್ಟವಿರಾಧವಿನಾಶನ ರಾಮ
೩೭ ಶರಭಂಗಸುತೀಕ್ಷ್ಣಾರ್ಚಿತ ರಾಮ
೩೮ ಅಗಸ್ತ್ಯಾನುಗ್ರಹವರ್ಧಿತ ರಾಮ
೩೯ ಗೃಧ್ರಾಧಿಪಸಂಸೇವಿತ ರಾಮ
೪೦ ಪಂಚವಟೀತಟಸುಸ್ಥಿತ ರಾಮ
೪೧ ಶೂರ್ಪಣಖಾರ್ತಿವಿಧಾಯಕ ರಾಮ
೪೨ ಖರದೂಷಣಮುಖಸೂದಕ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ
೪೩ ಸೀತಾಪ್ರಿಯಹರಿಣಾನುಗ ರಾಮ

೪೪ ಮಾರೀಚಾರ್ತಿಕೃದಾಶುಗ ರಾಮ
೪೫ ವಿನಷ್ಟಸೀತಾನ್ವೇಷಕ ರಾಮ
೪೬ ಗೃಧ್ರಾಧಿಪಗತಿದಾಯಕ ರಾಮ
೪೭ ಶಬರೀದತ್ತಫಲಾಶನ ರಾಮ
೪೮ ಕಬಂಧಬಾಹುಚ್ಛೇದನ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಕಿಷ್ಕಿಂಧಾಕಾಂಡಮ್

೪೯ ಹನುಮತ್ಸೇವಿತನಿಜಪದ ರಾಮ
೫೦ ನತಸುಗ್ರೀವಾಭೀಷ್ಟದ ರಾಮ
೫೧ ಗರ್ವಿತವಾಲಿಸಂಹಾರಕ ರಾಮ
೫೨ ವಾನರದೂತಪ್ರೇಷಕ ರಾಮ
೫೩ ಹಿತಕರಲಕ್ಷ್ಮಣಸಂಯುತ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಸುಂದರಕಾಂಡಮ್

೫೪ ಕಪಿವರಸಂತತಸಂಸ್ಮೃತ ರಾಮ
೫೫ ತದ್ಗತಿವಿಘ್ನಧ್ವಂಸಕ ರಾಮ
೫೬ ಸೀತಾಪ್ರಾಣಾಧಾರಕ ರಾಮ
೫೭ ದುಷ್ಟದಶಾನನದೂಷಿತ ರಾಮ
೫೮ ಶಿಷ್ಟಹನೂಮದ್ಭೂಷಿತ ರಾಮ
೫೯ ಸೀತಾವೇದಿತಕಾಕಾವನ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ
೬೦ ಕೃತಚೂಡಾಮಣಿದರ್ಶನ ರಾಮ
೬೧ ಕಪಿವರವಚನಾಶ್ವಾಸಿತ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಯುದ್ಧಕಾಂಡಮ್

೬೨ ರಾವಣನಿಧನಪ್ರಸ್ಥಿತ ರಾಮ
೬೩ ವಾನರಸೈನ್ಯಸಮಾವೃತ ರಾಮ
೬೪ ಶೋಷಿತಶರಧೀಶಾರ್ಥಿತ ರಾಮ
೬೫ ವಿಭೀಷಣಾಭಯದಾಯಕ ರಾಮ
೬೬ ಪರ್ವತಸೇತುನಿಬಂಧಕ ರಾಮ
೬೭ ಕುಂಭಕರ್ಣಶಿರಶ್ಛೇದಕ ರಾಮ
೬೮ ರಾಕ್ಷಸಸಂಘವಿಮರ್ದಕ ರಾಮ
೬೯ ಅಹಿಮಹಿರಾವಣಚಾರಣ ರಾಮ
೭೦ ಸಂಹೃತದಶಮುಖರಾವಣ ರಾಮ
೭೧ ವಿಧಿಭವಮುಖಸುರಸಂಸ್ತುತ ರಾಮ
೭೨ ಖಸ್ಥಿತದಶರಥವೀಕ್ಷಿತ ರಾಮ
೭೩ ಸೀತಾದರ್ಶನಮೋದಿತ ರಾಮ
೭೪ ಅಭಿಷಿಕ್ತವಿಭೀಷಣನತ ರಾಮ
೭೫ ಪುಷ್ಪಕಯಾನಾರೋಹಣ ರಾಮ
೭೬ ಭರದ್ವಾಜಾಭಿನಿಷೇವಣ ರಾಮ
೭೭ ಭರತಪ್ರಾಣಪ್ರಿಯಕರ ರಾಮ
೭೮ ಸಾಕೇತಪುರೀಭೂಷಣ ರಾಮ
೭೯ ಸಕಲಸ್ವೀಯಸಮಾನತ ರಾಮ
೮೦ ರತ್ನಲಸತ್ಪೀಠಾಸ್ಥಿತ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ
೮೧ ಪಟ್ಟಾಭಿಷೇಕಾಲಂಕೃತ ರಾಮ
೮೨ ಪಾರ್ಥಿವಕುಲಸಮ್ಮಾನಿತ ರಾಮ
೮೩ ವಿಭೀಷಣಾರ್ಪಿತರಂಗಕ ರಾಮ
೮೪ ಕೀಶಕುಲಾನುಗ್ರಹಕರ ರಾಮ
೮೫ ಸಕಲಜೀವಸಂರಕ್ಷಕ ರಾಮ
೮೬ ಸಮಸ್ತಲೋಕಾಧಾರಕ ರಾಮ
ರಾಮರಾಮ ಜಯರಾಜಾ ರಾಮ
ರಾಮರಾಮ ಜಯಸೀತಾ ರಾಮ

ಶ್ರೀ ಶಂಕರಾಚಾರ್ಯರು

ಮಂಗಳಾರತಿಯ ಬೆಳಗಿರೋ

ಮಂಗಳಾರತಿಯ ಬೆಳಗಿರೋ ಮಾದೇವನಿಗೆ
ಹೂವ ಚೆಲ್ಲಾಡಿ ಬನ್ನಿರೊ । ಸೊಲ್ಲು ।
    ಮಾದೇವ ನೀನೆ ಗತಿಯು
    ಮಾದೇವ ನೀನೆ ಮತಿಯು
    ನಂಬೀದ ಭಕ್ತರ ಮಲ್ಲಿ
    ಇಂಬಾಗ್ವಾಲಾಡೊ ಗುರುವೆ ।
ಹುಟುದಾದೆ ಉತ್ತುರ ದೇಸ
ಬೆಳುದಾದೆ ಕತ್ತಲ ರಾಜ್ಯ
ಕುಂತೂರ ಮಠವ ಸೇರಿ
ಏಳು ಮಲೆಯಲ್ಲೊರಗಿದೆ ಗುರುವೆ ।
ನೆನೆದವರ ಮನದೊಳಗಿದ್ದು
ಮರೆತವರ ಮನೆಯ ಮುರುದು
ನೆಂಬಿದೋರ ಮನೆಯಲಿ ಗುರುವೆ
ತುಂಬಿ ತುಳುಕಾಡುವ್ನೋನೆ ।
ಹುಟ್ಟುವಾಗ ಹುಲಿಯ ವರುಣ
ಬೆಳಿವಾಗ್ ರವರತ್ನದ ಪುಡಿಯು
ಲೋಕಕೆ ದೊಡ್ಡೋರು ಗುರುವೆ
ಪರಮಾತ್ಮ ಪರಂಜ್ಯೋತಿ ॥

ಡಾ. ಪಿ. ಕೆ. ರಾಜಶೇಖರ
ಗಂಧಾದ ಗವುಲೆದ್ದವೋ

ಪಂಚಾಂಗ

ತಿಥಿ, ವಾರ, ನಕ್ಷತ್ರ, ಯೋಗ, ಕರಣ

ತಿಥಿ – ಒಂದು ದಿನದ ಕಾಲಮಾನ

೧. ಪ್ರತಿಪತ್ (ಪಾಡ್ಯ)	೬. ಷಷ್ಠಿ	೧೧. ಏಕಾದಶಿ
೨. ದ್ವಿತೀಯ (ಬಿದಿಗೆ)	೭. ಸಪ್ತಮಿ	೧೨. ದ್ವಾದಶಿ
೩. ತೃತೀಯ (ತದಿಗೆ)	೮. ಅಷ್ಟಮಿ	೧೩. ತ್ರಯೋದಶಿ
೪. ಚತುರ್ಥಿ (ಚೌತಿ)	೯. ನವಮಿ	೧೪. ಚತುರ್ದಶಿ
೫. ಪಂಚಮಿ	೧೦. ದಶಮಿ	೧೫. ಪೂರ್ಣಿಮೆ / ೩೦. ಅಮಾವಾಸ್ಯೆ

ವಾರ – ಏಳು ದಿವಸಗಳ ಅವಧಿ

ರವಿ(ಭಾನು)ವಾರ, ಚಂದ್ರ(ಸೋಮ)ವಾರ, ಕುಜ (ಮಂಗಳ)ವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ

ನಕ್ಷತ್ರ – ಇಪ್ಪತ್ತೇಳು

೧. ಅಶ್ವಿನಿ, ೨. ಭರಣಿ, ೩. ಕೃತ್ತಿಕಾ	ಮೇಷಾ
೩. ಕೃತ್ತಿಕಾ, ೪. ರೋಹಿಣಿ, ೫. ಮೃಗಶಿರಾ	ವೃಷಭ
೫. ಮೃಗಶಿರಾ, ೬. ಆರ್ದ್ರಾ, ೭. ಪುನರ್ವಸು	ಮಿಥುನ
೭. ಪುನರ್ವಸು, ೮. ಪುಷ್ಯ, ೯. ಆಶ್ಲೇಷಾ	ಕರ್ಕಟ
೧೦. ಮಘಾ, ೧೧. ಪುಬ್ಬಾ, ೧೨. ಉತ್ತರಾ	ಸಿಂಹ
೧೨. ಉತ್ತರಾ, ೧೩. ಹಸ್ತ, ೧೪. ಚಿತ್ತ	ಕನ್ಯಾ
ಚಿತ್ತ, ೧೫. ಸ್ವಾತಿ, ೧೬. ವಿಶಾಖ	ತುಲಾ
೧೬. ವಿಶಾಖ, ೧೭. ಅನೂರಾಧ, ೧೮. ಜ್ಯೇಷ್ಠಾ	ವೃಶ್ಚಿಕ
೧೯. ಮೂಲ, ೨೦. ಪೂರ್ವಾಷಾಡಾ, ೨೧. ಉತ್ತರಾಷಾಡಾ	ಧನು
೨೧. ಉತ್ತರಾಷಾಡಾ, ೨೨. ಶ್ರವಣ, ೨೩. ಧನಿಷ್ಠ	ಮಕರ
೨೩. ಧನಿಷ್ಠ, ೨೪. ಶತಭಿಷ, ೨೫. ಪೂರ್ವಾಭಾದ್ರ	ಕುಂಭ
೨೫. ಪೂರ್ವಾಭಾದ್ರ, ೨೬. ಉತ್ತರಾಭಾದ್ರ, ೨೭. ರೇವತಿ	ಮೀನ

ಯೋಗ – ಹೊಂದಿಕೆ, ಕೂಡುವುದು – ಇಪ್ಪತ್ತೇಳು

೧.	ವಿಷ್ಕಂಭ	೧೦.	ಗಂಡ	೧೯	ಪರಿಘ
೨.	ಪ್ರೀತಿ	೧೧.	ವೃದ್ಧಿ	೨೦	ಶಿವ
೩.	ಆಯುಷ್ಮಾನ್	೧೨.	ಧ್ರುವ	೨೧	ಸಿದ್ಧ
೪.	ಸೌಭಾಗ್ಯ	೧೩.	ವ್ಯಾಘಾತ	೨೨	ಸಾಧ್ಯ
೫.	ಶೋಭನ	೧೪	ಹರ್ಷಿಣ	೨೩	ಶುಭ
೬.	ಅತಿಗಂಡ	೧೫	ವಜ್ರ	೨೪	ಶುಕ್ಲ
೭.	ಸುಕರ್ಮ	೧೬	ಸಿದ್ಧಿ	೨೫	ಬ್ರಹ್ಮ
೮.	ಧೃತಿ	೧೭	ವ್ಯತೀಪಾತ	೨೬	ಐಂದ್ರ
೯.	ಶೂಲ	೧೮	ವರಿಯನ್	೨೭	ವೈಧೃತಿ

ಕರಣ – ಕೆಲಸ – ಸಾಧನ ಹನ್ನೊಂದು


೧ ಬವ (ಸಿಂಹ) ಚರ
೨ ಬಾಲವ (ವ್ಯಾಘ್ರ) ಚರ
೩ ಕೌಲವ (ವರಾಹ) ಚರ
೪ ತೈತಲೆ (ಗಾರ್ದಭ) ಚರ
೫ ಗರಜೆ (ಗಜ) ಚರ
೬ ವಣಿಕ್ (ಮಹಿಷಿ) ಚರ
೭ ಭದ್ರೆ (ಅಶ್ವ) ಚರ
೮ ಶಕುನಿ (ಶ್ವಾನ) ಸ್ಥಿರ
೯ ಚತುಷ್ಪಾತ್ (ವೃಷಭ) ಸ್ಥಿರ
೧೦ ನಾಗವಾನ್ (ಸರ್ಪ) ಸ್ಥಿರ
೧೧ ಕಿಂಸ್ತುಘ್ನ (ಕುಕ್ಕುಟ) ಸ್ಥಿರ

ಪಕ್ಷ = ೧೫ ದಿನಗಳ ಅವಧಿ – ಶುಕ್ಲ ಪಕ್ಷ ; ಕೃಷ್ಣ ಪಕ್ಷ
ಪಾಡ್ಯದಿಂದ ಪೂರ್ಣಿಮೆಗೆ ಶುಕ್ಲಪಕ್ಷ (ಶುದ್ಧ)
ಪಾಡ್ಯದಿಂದ ಅಮಾವಾಸ್ಯೆಗೆ ಕೃಷ್ಣಪಕ್ಷ (ಬಹುಳ)

ಮಾಸ = ೩೦ ದಿವಸಗಳ ಅವಧಿ (ತಿಂಗಳು) ಹನ್ನೆರಡು ಚಾಂದ್ರಮಾನ ಮಾಸಗಳು

೧ ಚೈತ್ರ
೨ ವೈಶಾಖ
೩ ಜ್ಯೇಷ್ಠ
೪ ಆಷಾಢ
೫ ಶ್ರಾವಣ
೬ ಭಾದ್ರಪದ
೭ ಆಶ್ವಯುಜ
೮ ಕಾರ್ತಿಕ
೯ ಮಾರ್ಗಶಿರ
೧೦ ಪುಷ್ಯ
೧೧ ಮಾಘ
೧೨ ಪಾಲ್ಗುಣ

ಅಷ್ಟ ದಿಕ್ಕುಗಳು



ದಶಾವತಾರಗಳು ಮತ್ತು ಯುಗಗಳು

ಕೃತಯುಗದಲ್ಲಿ

೧ ಮತ್ಸ್ಯ (ಮೀನು)
೨ ಕೂರ್ಮ (ಆಮೆ)
೩ ವರಾಹ (ಹಂದಿ)
೪ ನಾರಸಿಂಹ (ಮನುಷ್ಯ ರೂಪದ ಸಿಂಹ)
೫ ವಾಮನ (ಕುಳ್ಳ)

ತ್ರೇತಾಯುಗದಲ್ಲಿ

೬ ಪರಶುರಾಮ (ಕೊಡಲಿ ಹಿಡಿದವ)
೭ ರಾಮ (ನಡತೆಗೆ ಆದರ್ಶ)

ದ್ವಾಪರ ಯುಗದಲ್ಲಿ

೮ ಕೃಷ್ಣ (ನುಡಿಗೆ ಆದರ್ಶ)

ಕಲಿಯುಗದಲ್ಲಿ

೯ ಬುದ್ಧ, ಮಹಾವೀರ (ಚಿಂತನೆ, ಅಹಿಂಸೆ)
೧೦ ಕಲ್ಕಿ (ಕಲುಷಿತ, ಕಲಹ)

ನವಧಾನ್ಯಗಳು : ಗೋಧಿ, ಭತ್ತ, ತೊಗರಿ, ಹೆಸರು, ಕಡಲೆ, ಅವರೆ, ಎಳ್ಳು, ಉದ್ದು, ಹುರುಳಿ

ಋತು – ವರ್ಷದ ಎರಡೆರಡು ಮಾಸ(ತಿಂಗಳು)ಗಳ ಕಾಲದ ಅವಧಿ
ವರ್ಷದ ಹನ್ನೆರಡು ಮಾಸಳಿಗೆ ಆರು ಋತುಗಳು

೧	ವಸಂತ	ಚೈತ್ರ, ವೈಶಾಖ
೨	ಗ್ರೀಷ್ಮ	ಜ್ಯೇಷ್ಠ, ಆಷಾಡ
೩	ವರ್ಷ	ಶ್ರಾವಣ, ಭಾದ್ರಪದ
೪	ಶರತ್	ಆಶ್ವಯುಜ, ಕಾರ್ತಿಕ
೫	ಹೇಮಂತ	ಮಾರ್ಗಶಿರ, ಪುಷ್ಯ
೬	ಶಿಶಿರ	ಮಾಘ, ಪಾಲ್ಗುಣ

ದ್ವಾದಶ ರಾಶಿಗಳು

೧ ಮೇಷ	೫ ಸಿಂಹ	೯ ಧನುಸ್ಸು
೨ ವೃಷಭ	೬ ಕನ್ಯಾ	೧೦ ಮಕರ
೩ ಮಿಥುನ	೭ ತುಲಾ	೧೧ ಕುಂಭ
೪ ಕಟಕ	೮ ವೃಶ್ಚಿಕ	೧೨ ಮೀನ

ಅಷ್ಟಾದಶ ಪುರಾಣಗಳು – ಹದಿನೆಂಟು

೧ ಮತ್ಸ್ಯ	೧೧ ವರಾಹ
೨ ಮಾರ್ಕಂಡೇಯ	೧೨ ಅಗ್ನಿ
೩ ಭವಿಷ್ಯ	೧೩ ನಾರದ
೪ ಭಾಗವತ	೧೪ ಪದ್ಮ
೫ ಬ್ರಹ್ಮ	೧೫ ಲಿಂಗ
೬ ಬ್ರಹ್ಮಾಂಡ	೧೬ ಗರುಡ
೭ ಬ್ರಹ್ಮ ವೈವರ್ತ	೧೭ ಗರುಡ
೮ ವಾಮನ	೧೮ ಕೂರ್ಮ
೯ ವಾಯು	೧೯ ಸ್ಕಂದ
೧೦ ವಿಷ್ಣು	

ಪರಮೇಶ್ವರನ ಇಪ್ಪತ್ತೈದು ಅವತಾರಗಳು

೧. ಚಂದ್ರಶೇಖರಃ (ಚಂದ್ರನನ್ನು ಧರಿಸಿದವ)
೨. ಉಮಾಮಹೇಶ್ವರಃ
೩. ವೃಷಭಾರೂಢಃ (ನಂದಿಯನ್ನು ಏರಿದವ)
೪. ನೃತ್ಯರೂಪಃ (ತಾಂಡವೇಶ್ವರಮೂರ್ತಿ)
೫. ವೈವಾಹ್ಯಃ (ಕಲ್ಯಾಣ ಮೂರ್ತಿ)
೬. ಭಿಕ್ಷಾಟನಃ (ಬ್ರಹ್ಮಕಪಾಲ)
೭. ಕಾಮಾರಿಃ (ಕಾಮಸಂಹಾರಿ) ಹಣೆಗಣ್ಣಿನಿಂದ ಮನ್ಮಥನ ದಹನ
೮. ಕಾಲಾರಿಃ (ಕಾಲಸಂಹಾರ) ಯಮನಿಂದ ಮಾರ್ಕಂಡೇಯನ ರಕ್ಷಣೆ
೯. ತ್ರಿಪುರಾರಿಃ (ತ್ರಿಪುರ ಸಂಹಾರ)
೧೦. ಜಲಂಧರ ವಧಃ
೧೧. ಗಜಾರಿಃ (ಗಜಾಸುರನ ವಧೆ)
೧೨. ವೀರಭದ್ರಃ
೧೩. ಹರ್ಯರ್ಧಃ (ಶಂಕರನಾರಾಯಣಮೂರ್ತಿ)
೧೪. ಅರ್ಧನಾರೀಶ್ವರಃ
೧೫. ಕಿರಾತಃ (ಕಿರಾತಾರ್ಜುನ)
೧೬. ಕಂಕಾಲಃ (ವರಹದ ಶರೀರಾಸ್ಥಿಯನ್ನು ಧರಿಸಿದ್ದು)
೧೭. ಚಂಡೇಶಾನುಗ್ರಹಃ (ಚಂಡಿಕೇಶ್ವರ ಪ್ರಸನ್ನಮೂರ್ತಿ)
೧೮. ವಿಷಾಪಹರಣಃ (ವಿಷಕಂಠಮೂರ್ತಿ)
೧೯. ಚಕ್ರದಾನಃ (ವಿಷ್ಣುವಿಗೆ ಸುದರ್ಶನ ಚಕ್ರದ ದಾನ)
೨೦. ವಿಘ್ನಪ್ರಸಾದಃ (ಗಣಪತಿಯ ಹುಟ್ಟು)
೨೧. ಸೋಮಾಸ್ಕಂದಃ (ಕುಮಾರಸ್ವಾಮಿ ಕಾರ್ತಿಕೇಯನಾದದ್ದು)
೨೨. ಏಕಪಾದಃ (ಏಕಪಾದಮೂರ್ತಿ) (ಭೃಂಗೀಶ್ವರನ ಉದ್ಧಾರ)
೨೩. ಸುಖಾವಹಃ (ಸುಖಾಸೀನ ಮೂರ್ತಿ) (ಶಿವತತ್ವದ ಉಪದೇಶ)
೨೪. ದಕ್ಷಿಣಾಮೂರ್ತಿಃ
೨೫. ಲಿಂಗೋದ್ಭವಃ (ಮಹಾಲಿಂಗೇಶ್ವರ ಮೂರ್ತಿ)

ಗೋವಿನ ಹಾಡು

ಧರಣಿ ಮಂಡಲ ಮಧ್ಯದೊಳಗೆ
ಮೆರೆವುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು ॥ ೧ ॥

ರೂಢಿಯೊಳಗರುಣಾದ್ರಿಗಿರಿಯು
ನಾಡಿನೊಳಿಗಹುದೊಂದು ಬೆಟ್ಟವು
ರೂಢಿಗಂಬರ ತುರುಕುವಂದದಿ
ನೋಡಲಾಶ್ಚರ್ಯವೆನಿಸಿತು ॥ ೨ ॥

ಸೃಷ್ಟಿಯೊಳಗರುಣಾದ್ರಿಗಿರಿಯು
ಬೆಟ್ಟದಾ ಬಳಸೇಳು ಗಿರಿಗಳು
ನೆಟ್ಟನೆ ಹನ್ನೆರಡು ಯೋಜನ
ದಟ್ಟೈಸಿತಾರಣ್ಯದಿ ॥ ೩ ॥

ನಾಗಸಂಪಗೆ ಮಾವು ನೇರಿಲು
ತೇಗ ಚೆನ್ನಂಗಿ ಬನ್ನಿ ಪಾದ್ರಿಯು
ಬಾಗೆ ತಿಂತ್ರಿಣಿ ಮತ್ತೆ ಬಿಲ್ವ
ತಾಗಿ ಮೆರೆದವರಣ್ಯದಿ ॥ ೪ ॥

ಆಲವರಳಿಯು ಅತ್ತಿಕಿತ್ತಳೆ
ಜಾಲ ತದಿಗಿಲು ಅಗಿಲು ಶ್ರೀಗಂಧ
ಬೇಲ ಭೂತಳೆ ಬಿದಿರು ಬೂರಗ
ಲೀಲೆಯೊಳು ವನವೊಪ್ಪಿತು ॥ ೫ ॥

ಎಕ್ಕೆ ಎಲಚಿಯು ಲಕ್ಕಿಗಿಡಗಳು
ಸೊಕ್ಕಿ ಮೆರೆವಾ ಸೀಗೆ ಮರಗಳು
ಉಕ್ಕಿ ಬೆಳೆಯುವ ನೆಲ್ಲಿಗಿಡಗಳು
ತೆಕ್ಕಯಿಸಿತಾರಣ್ಯದಿ ॥ ೬ ॥

ತೊಂಡೆ ತೊಟ್ಟಿಯು ಸೊಂಡೆಗಿಡ ಭೂ
ಮಂಡಲಾದೊಳು ಬೆಳೆವ ತೊಳಸಿಯು

ಉಂಡು ಸಂತಸಗೊಂಬ ನೇರಿಲು
ತಂಡ ತಂಡದಿ ಮೆರೆದುವು ॥ ೭ ॥

ಮೊಲ್ಲೆ ಮಲ್ಲಿಗೆ ಮುಗುಲು ಸಂಪಿಗೆ
ಚೆಲ್ವ ಜಾಜಿಯು ಸುರಗಿ ಸುರಹೊನ್ನೆ
ಎಲ್ಲಿ ನೋಡಲು ದವನ ಕೇತಕಿ
ಅಲ್ಲಿ ಮೆರೆದವರಣ್ಯದಿ ॥ ೮ ॥

ನಿಂಬೆ ನೇರಿಲು ಹಲಸು ಬೇಲವು
ಅಂಬರಕ್ಕೆ ಹರಿವ ಅಡಕೆಯು
ತುಂಬಿ ತುಳುಕುವ ತೆಂಗಿನಾ ಮರ
ಸಂಭ್ರಮಾದೊಳು ಮೆರೆದವು ॥ ೯ ॥

ಆಡಸೋಗೆಯು ಕಾಡುನುಗ್ಗೆಯು
ರೂಢಿಯಿಂದಲಿ ಬೆಳೆವ ತಗ್ಗಿಯು
ಕೂಡಿ ಬೆಳೆಯುವ ಈಜಿಯಿಪ್ಪೆಯು
ರೂಢಿಯೊಳು ವನವೊಪ್ಪಿತು ॥ ೧೦ ॥

ವರಹ ಶಾರ್ದೂಲ ಸಿಂಹ ವಾರಣ
ಕರಡಿ ಕಾಡೆಮ್ಮೆ ಕಡವೆ ಮೃಗಗಳು
ಅರುಣ ಸಾರಗ ಬೆಕ್ಕು ಜಂಬುಕ
ಮರೆಹುಲ್ಲೆ ಸಿಂಗ ಮುಸುವನು ॥ ೧೧ ॥

ಗಿಳಿಯು ಕೋಗಿಲೆ ನವಿಲು ಕಾಡ್ಕೋಳಿ
ಪೊಳೆವ ಕಾಡ್ಬೆಕ್ಕು ಲಗಡೆ ರಣಹದ್ದು
ಸುಳಿವ ಕಾಳಿಂಗ ಹಂಸ ಚಕೋರನ
ಬಳಗವೊಪ್ಪಿತು ವನದೊಳು ॥ ೧೨ ॥

ಪಚ್ಚೆಹಕ್ಕಿಯು ಪಾರಿವಾಳವ
ಹೆಚ್ಚಿನಾ ಗೌಜೀನ ಹಕ್ಕಿಯು
ಕಚ್ಚಿ ಆಡುವ ಸಿಪಲೆ ಹಕ್ಕಿಯು
ರಚ್ಚಿಸಿ ಮೆರೆದವರಣ್ಯದಿ ॥ ೧೩ ॥

ಬಣ್ಣದುರುಳಿಯು ಬೆಟ್ಟದಾವರೆ
ಕಣ್ಣಿಗೆ ಪ್ರಿಯವಾದ ಸರ್ಪವು

ಬಣ್ಣ ಬಣ್ಣದ ಕೀರ ಮರಿಗಳು
ತಣ್ಣಗಿರ್ದವರಣ್ಯದಿ || ೧೪ ||

ಉರುಬಿನಿಂದಾ ಬರುವ ಕರಿಗಳು
ಎರಗಿ ಬರುತಿಹ ಗೆಂಡಾಮೃಗಗಳು
ತರುಬಿ ಬರುತಿಹ ಮಲೆಯ ಹೋರಿಯು
ಬಳಸಿ ಮೆರೆದವರಣ್ಯದಿ || ೧೫ ||

ಕೆಂಚ ನಾಯ್ಗಳು ಕೆಲವು ಕಾಡ್ಕೋಳಿ
ಪಂಚವರ್ಣದ ಪಾರಿವಾಳವು
ಸಂಚಿನೊಳ್ತಾ ಬರುವ ಕಿರುಬನು
ಮುಂಚಿ ಮೆರೆದವರಣ್ಯದಿ || ೧೬ ||

ಹೊಂಚಿ ಕಾಯುವ ತೋಳ ನರಿಗಳು
ಅಂಜಿವೋಡುವ ಮೊಲನು ಕಪಿಗಳು
ರಂಜಿಸುತ್ತಿಹ ಕೋಣ ಮರಿಗಳು
ಬಂದು ಮೆರೆದವರಣ್ಯದಿ || ೧೭ ||

ಗಿರಿಯ ಪ್ರಾಂತ್ಯದಿ ಶೈಲಗೃಹದಿ
ಇರುವ ಮುನಿಗಳು ತಪಸಿ ಸಿದ್ಧರು
ಪರಮ ಮುನಿಜನ ಬ್ರಹ್ಮ ಋಷಿಗಳು
ಹರಿಯ ಧ್ಯಾನದೊಳಿರ್ದರು || ೧೮ ||

ಪೃಥ್ವಿಯೊಳಗರುಣಾದ್ರಿಗಿರಿಯು
ಒತ್ತಿನೊಳಗಿಹ ಪುಣ್ಯತೀರ್ಥವು
ಸತ್ಯಸಾಗರ ಮುಂದೆ ಗೌತಮಿ
ಉತ್ತಮಾ ನದಿ ಮೆರೆದವು || ೧೯ ||

ಗಿರಿಗಳೆಡೆಯೊಳು ಅಡವಿ ಮಧ್ಯದಿ
ತುರುವ ದೊಡ್ಡಿಯ ಮಾಡಿಕೊಂಡು
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು || ೨೦ ||

ಗೊಲ್ಲದೊಡ್ಡಿಯೊಳಿರುವ ಪಶುಗಳು
ಎಲ್ಲ ಬೆಟ್ಟದ ಮೇಲೆ ಮೇಯುತ

ಒಳ್ಳೆ ಹುಲ್ಲು ನೀರ್ಗಳಿಂದಲಿ
ಅಲ್ಲಿ ಮೆರೆದವರಣ್ಯದಿ ॥ ೨೧ ॥

ತಿರುಗಿ ಮಂದೆಗೆ ಬರುತ ಪಶುಗಳು
ನೆನೆದು ತಮ್ಮಾ ಕರುಗಳನ್ನು
ಪರಿದು ಲಂಘಿಸಿ ಚಿಮ್ಮಿ ನೆಗೆಯುತ
ಭರದಿ ಬಂದವು ದೊಡ್ಡಿಗೆ ॥ ೨೨ ॥

ತಮ್ಮ ತಾಯ್ಗಳ ಕಂಡು ಕರುಗಳು
ಅಮ್ಮನೆಂದೂ ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲಾದೊಳು ಇದ್ದವು ॥ ೨೩ ॥

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮದನ ತಿಲಕವ ಫಣೆಯೊಳಿಟ್ಟು
ಚದುರಸಿಕೆಯನು ಹಾಕಿದ ॥ ೨೪ ॥

ಉಟ್ಟ ದಟ್ಟಿಯು ಪಟ್ಟೆ ಚಲ್ಲಣ
ತೊಟ್ಟ ಪದಕವು ಬಿಲ್ಲೆ ಸರಗಳು
ಕಟ್ಟ ಭಾಪುರಿ ಭುಜದ ಕೀರ್ತಿಯು
ಇಟ್ಟ ಮುದ್ರಿಕೆಯುಂಗುರ ॥ ೨೫ ॥

ಪಚ್ಚೆ ಕಡಗವು ಪವಳದಾಸರ
ಹೆಚ್ಚಿನಾ ಕಾಲ್ಗಡಗ ಗೆಜ್ಜೆಯು
ನಿಶ್ಚಿತಾನಂದದಲಿ ಮೆರೆದನು
ಮುತ್ತಿನಾ ಸರ ಪದಕವು ॥ ೨೬ ॥

ಇಟ್ಟ ಮುತ್ತಿನ ಒಂಟಿ ಬಾವುಲಿ
ಕಂಠಮಾಲೆ ಪದಕ ಸರಗಳು
ದಿಟ್ಟತನದಲಿ ಧರಿಸಿ ಮೆರೆದನು
ಗಂಟೆ ಮೊದಲಾದೊಡವೆಯಾ ॥ ೨೭ ॥

ನೀಲದೊಂಟಿಯು ತಾಳಿ ಚೌಕಳಿ
ಕಾಲ ಕಡಗವು ಮೇಲೆ ಭಾಪುರಿ

ನೀಲದುಂಗುರ ಕಾಲ ಸರಗಳು
ಲೋಲ ಧರಿಸಿಯೆ ಮೆರೆದನು || ೨೮ ||

ಚಂದ್ರಗಾವಿಯ ಅಂಗಿತೊಟ್ಟು
ಇಂದ್ರನೀಲದ ಪಾಗುಸುತ್ತಿ
ಚಂದಕಾಂತದ ದುಪಟಿಯನ್ನು
ಚಂದದಿಂದಲಿ ಪೊದ್ದನು || ೨೯ ||

ಗೊಲ್ಲ ಶೃಂಗಾರೀಸಿಕೊಂಡು
ಒಳ್ಳೆ ದುಕುಲಗಳನ್ನು ಪೊದ್ದು
ಬೆಳ್ಳಿಯಂಡೆಯ ಕೈಲಿ ಪಿಡಿದು
ಎಲ್ಲ ಗೋವ್ಗಳ ಕರೆದನು || ೩೦ ||

ಎಳೆಯ ಮಾವಿನ ಮರದ ಕೆಳಗೆ
ಕೊಳನೂದುತ ಗೊಲ್ಲಗೌಡನು
ಬಳಸಿ ಬರುವ ತುರುಗಳನ್ನು
ಬಳಿಗೆ ಕರೆದನು ಹರುಷದಿ || ೩೧ ||

ಪಾರ್ವತೀ ಲಕ್ಷ್ಮೀಯು ಬಾರೆ
ಸರಸ ಸದ್ಗುಣವನಿತೆ ಬಾರೆ
ಸರಸ್ವತಿಯ ಮಾಣಿಕವೆ ಬಾರೆಂದು
ಸರಸದಿಂ ಗೊಲ್ಲ ಕರೆದನು || ೩೨ ||

ಉದಯ ಭಾಸ್ಕರ ದೇವಿ ಬಾರೆ
ಚದುರ ಗುಣ ಸಂಪನ್ನೆ ಬಾರೆ
ಹೃದಯ ನಿರ್ಮಳೆ ನೀನು ಬಾರೆಂದು
ಹರುಷದೊಳು ಗೊಲ್ಲ ಕರೆದನು || ೩೩

ಧರ್ಮದೇವಿ ನೀನು ಬಾರೆ
ಧರ್ಮಗುಣದಾ ತಾಯೆ ಬಾರೆ
ಧರ್ಮವತಿಯೇ ನೀನು ಬಾರೆಂದು
ಪ್ರೇಮದೊಳು ಗೊಲ್ಲ ಕರೆದನು || ೩೪

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೆ ನೀನು ಬಾರೆ

ಅಂಗನಾಮಣಿ ನೀನು ಬಾರೆಂದು
ಸರಸದಿಂ ಗೊಲ್ಲ ಕರೆದನು || ೩೫ ||

ರಂಗನಾಯಕಿ ನೀನು ಬಾರೆ
ರಘುಕುಲೋತ್ತಮೆ ನೀನು ಬಾರೆ
ಶೃಂಗಾರದ ಸೊಬಗಿ ಬಾರೆಂದು
ಅಂಗವಿಸಿ ಗೊಲ್ಲ ಕರೆದನು || ೩೬ ||

ಪುಣ್ಯಕೋಟಿಯೆ ನೀನು ಬಾರೆ
ಪುಣ್ಯವಾಹಿನಿ ನೀನು ಬಾರೆ
ಪೂರ್ಣಗುಣ ಸಂಪನ್ನೆ ಬಾರೆಂದು
ನಾಣ್ಯದಿಂ ಗೊಲ್ಲ ಕರೆದನು || ೩೭ ||

ಕಾಮಧೇನುವೆ ನೀನು ಬಾರೆ
ಭೂಮಿ ದೇವಿಯೆ ನೀವು ಬಾರೆ
ರಾಮನರಗಿಣಿ ನೀನು ಬಾರೆಂದು
ಪ್ರೇಮದಿಂ ಗೊಲ್ಲ ಕರೆದನು || ೩೮ ||

ಭಾಗ್ಯ ಲಕ್ಷ್ಮಿಯೆ ನೀನು ಬಾರೆ
ಭಾಗ್ಯ ಗುಣ ಚಾರಿತ್ರೆ ಬಾರೆ
ಯೋಗವತಿಯೇ ನೀನು ಬಾರೆಂದು
ಬೇಗದಿಂದ ಗೊಲ್ಲ ಕರೆದನು || ೩೯ ||

ಗೊಲ್ಲ ಕರೆದಾ ಧ್ವನಿಯ ಕೇಳಿ
ಎಲ್ಲ ಪಶುಗಳು ಬಂದವಾಗ
ಚಲ್ಲಿ ಸೂಸಿ ಪಾಲ ಕರೆದು
ಅಲ್ಲಿ ತುಂಬಿತು ಬಿಂದಿಗೆ || ೪೦ ||

ಒಡನೆ ದೊಡ್ಡಿಯ ಬಿಡುತ ಪಶುಗಳು
ನಡೆದವಾಗಾರಾಣ್ಯಕಾಗಿ
ಕಡಲು ಮೆಘವು ತೆರಳುವಂದದಿ
ನಡೆದವಾಗಾರಣ್ಯಕೆ || ೪೧ ||

ಎಣಿಕೆ ಹುಲ್ಲೆ ವರ್ಣದಾವು
ಉನ್ನಂತ ಬೆಟ್ಟದ ಕೆಂದ ಅವು

ಉನ್ನಂತವಹ ಕಪಿಲೆ ಗೋವ್ಗಳು
ಉನ್ನಂತವಾಗಿ ನಡೆದವು ॥ ೪೨ ॥

ಕರುವುಗಾಳು ಕಡಸುಗಾಳು
ಸರಿಯ ಪ್ರಾಯದ ಎತ್ತುಗಳು
ದುರುಳು ಪ್ರಾಯದ ಗೋವ್ಗಳೆಲ್ಲ
ತೆರಳಿದಾವಾರಣ್ಯಕೆ ॥ ೪೩ ॥

ಅಟ್ಟ ಬೆಟ್ಟದ ಕಿಬ್ಬಿಯೊಳಗೆ
ಇಟ್ಟೆಡೆಯ ಬೆಟ್ಟಾದ ನಡುವೆ
ದಟ್ಟೈಸಿದಾ ಸಸಿಗಳೆಡೆಯೊಳು
ಮುಟ್ಟಿ ಮೇದವು ಹುಲ್ಲನು ॥ ೪೪ ॥

ಅಕ್ಕಿಯಂತ ಹುಲ್ಲುಗಳನು
ಸಕ್ಕರೆಯಂದದಲಿ ಸವಿದು
ಅಕ್ಕರಿಂದಾಹಾರಗೊಂಡು
ಸೊಕ್ಕಿ ಸಂತಸಗೊಂಡವು ॥೪೫ ॥

ಹರಿದು ಮೇದ ಪಶುಗಳನ್ನು
ಕರೆದು ತಂದನು ಗೊಲ್ಲಗೌಡನು
ಕೊರಳ ಗಂಟೆಯ ಢಣಿರು ಢಣಿರೆನೆ
ಮರಳಿ ಬರುತಿರೆ ದೊಡ್ಡಿಗೆ ॥ ೪೬ ॥

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಬುತಾನೆಂತೆಂಬ ವ್ಯಾಘ್ರನು
ಗಬ್ಬಿತನದೊಳು ಬೆಟ್ಟದಾ ಅಡಿ
ಕಿಬ್ಬಿಯೊಳು ತಾನಿರುವನು ॥ ೪೭ ॥

ಒಡಲಿಗೇಳು ದಿವಸದಿಂದ
ತಡೆದಾಹಾರವ ಬಳಲಿ ವ್ಯಾಘ್ರನು
ಅಡಗಿಕೊಂಡು ಗವಿಯ ಬಾಗಿಲ
ಹೊಡನುಡಿಯ ಆಲಿಸುತಿರ್ದನು ॥ ೪೮ ॥

ಕೊರಳ ಗಂಟೆಯ ದನಿಯು ಕರ್ಣಕೆ
ಎರಗಲಾಕ್ಷಣ ವ್ಯಾಘ್ರನೆದ್ದು

ಹರಿದು ಆಹಾರಗೊಂಬೆನೆನುತಲಿ
ಹೊರಹೊರಟು ತಾ ಬಂದಿತು || ೪೯ ||

ಸಿಡಿಲು ಘೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ವ್ಯಾಘ್ರನು
ತುಡುಕಿಯೆರಗಿದ ರಭಸದಿಂದೊ
ಗ್ಗೊಡೆದವಾಗಾ ಗೋವ್ಗಳು || ೫೦ ||

ಅದರ ರಭಸಕೆ ನಿಲ್ಲಲರಿಯದೆ
ಕದುಬಿ ಕಮರಿಯ ಬಿದ್ದು ಪಶುಗಳು
ಪದರಿ ತಲ್ಲಣಗೊಂಡು ಪಶುಗಳು
ಚೆದರಿ ಓಡಿಹೋದವು || ೫೧ ||

ಚೆಲ್ಲಿವೋಡುವ ಪಶುಗಳನ್ನು
ಸಿಕ್ಕಲಿಲ್ಲಾವೆನುತ ವ್ಯಾಘ್ರನು
ಅಲ್ಲಿ ಕೋಪದಿ ಹಲ್ಲು ಕಡಿಯುತ
ದಿಕ್ಕು ದಿಕ್ಕಿಗೆ ನೋಡಿತು || ೫೨ ||

ಕೋಮಲತೆಯಿಂ ನಲಿದು ನೆಗೆಯುತ
ಆ ಮಹಾಟವಿ ಮಧ್ಯದಲ್ಲಿ
ಪ್ರೇಮದಿಂದಲಿ ಬರುವ ಪಶುವನು
ಭೂಮಿಯೊಳು ಹುಲಿ ಕಂಡಿತು || ೫೩ ||

ಕನ್ನೆ ಮಗನ ಪಡೆದ ಪಶುವು
ತನ್ನ ಕಂದನ ನೆನೆದುಕೊಂಡು
ಪುಣ್ಯಕೋಟಿಯೆಂಬ ಪಶುವು
ಚೆನ್ನಾಗಿ ತಾ ಬರುತಿರೆ || ೫೪ ||

ಇಂದು ಎನಗಾಹಾರ ಸಂದಿತು
ಎನುತಲಾಗ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ಕೊಂಡಿತಾಗ ಪಶುವನು || ೫೫ ||

ಹೊಲನ ಗದ್ದೆಯ ಹಾಳುಮಾಡಿದೆ
ಬೆಳೆದ ಪೈರನು ಸವಿದು ಕೆಡಿಸಿದೆ

ಬಳಿಕ ಎನ್ನಯ ಗವಿಯ ಬಳಿಗೆ
ತಳುಗದೇ ನೀ ಬಂದೆಯಾ || ೫೬ ||

ಎಂದು ಹುಲಿಯು ಅಡ್ಡಗಟ್ಟೆ
ಹಿಂದೆ ಮುಂದಿಹ ಪಶುಗಳೆಲ್ಲ
ಒಂದಕೊಂದು ಭಯದೊಳೋಡಿ
ಮುಂದೆ ದೊಡ್ಡಿಗೆ ಬಂದವು || ೫೭ ||

ಪುಣ್ಯಕೋಟಿ ಎಂಬ ಪಶುವನು
ತಾನು ತಿಂದೇನೆಂದು ಹುಲಿಯು
ಚೆನ್ನಗೋವನು ಅಡ್ಡಗಟ್ಟಿ
ತಿನ್ನ ಯತ್ನೀಕರಿಸಿತು || ೫೮ ||

ಖೂಳ ಹುಲಿಯು ಅಡ್ಡಗಟ್ಟಿ
ಬೀಳ ಹೊಯ್ವೆನು ನಿನ್ನನೆನುತಲಿ
ಸೀಳಿ ಬಿಸುಡುವೆ ಬೇಗವೆನುತ
ಪ್ರಳಯವಾಗಿಯೆ ಕೋಪಿಸೆ || ೫೯ ||

ಹಾಳುಮಾಡುವ ಗರತಿಯಲ್ಲ
ಬೀಳುಮಾಡುವ ಗೈಮೆಯಲ್ಲ
ಬಾಳುವಂತೆ ಮಾಳ್ಪೆ ಧರೆಯೊಳು
ಕೇಳಯ್ಯ ಹುಲಿರಾಯನೆ || ೬೦ ||

ನಾನು ಮೆಟ್ಟಿದಭೂಮಿ ಬೆಳೆವುದು
ಧಾನ್ಯಧನಗಳುಂಟು ಮಾಡುವೆ
ಶಾನೆ ಕ್ಷೀರವ ಕೊಡುವೆ ನಿತ್ಯವು
ಮಾನವರಿಗುಪಕಾರಿಯು || ೬೧ ||

ಅಡವಿಯೊಳಗಣ ಹುಲ್ಲ ಮೇಯುವೆ
ಮಡುವಿನೊಳಗಣ ನೀರ ಕುಡಿಯುವೆ
ಒಡೆಯನಾಜ್ಞೆಯಿಂದಲಿರುವೆನು
ಕಡೆಹಾಯಿಸು ಹುಲಿರಾಯನೆ || ೬೨ ||

ಉತ್ತರಾವನು ಕೊಡಲು ಹುಲಿಯು
ಮತ್ತೆ ಕೋಪದಿ ರೌದ್ರತಾಳಿ

ಕತ್ತ ಮುರಿವೆನು ಕಚ್ಚಿ ಒದರುವೆ
ರಕ್ತ ಹೀರುವೆನೆಂದಿತು || ೬೩ ||

ಒಂದು ಬಿನ್ನಹ ಹುಲಿಯರಾಯನೆ
ಕಂದನೈದನೆ ಮನೆಯ ಒಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ನಾನಿಲ್ಲಿ ನಿಲ್ಲುವೆ || ೬೪ ||

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶಮಾಡಿಕೊಳ್ಳದೀಗ
ನುಸುಳಿಹೋದರೆ ನೀನು ಬರುವೆಯ
ಹಸನಾಯಿತೀಗೆಂದಿತು || ೬೫ ||

ಮುನ್ನ ಪಾಂಡವ ಸತಿಯು ಹುಸಿದು
ತನ್ನ ನಿಜವನು ತಪ್ಪಿ ನಡೆದಳು
ನಿನ್ನ ನಂಬುವರಾರು ಈಗ
ನಿನ್ನ ನಾ ಬಿಡೆನೆಂದಿತು || ೬೬ ||

ಮೂರು ಮೂರ್ತಿಗಳಾಣೆ ಬರುವೆನು
ಸೂರ್ಯಚಂದ್ರಮರಾಣೆ ಬರುವೆನು
ಧಾರುಣೀ ದೇವಿಯಾಣೆ ಬರುವೆನು
ಎಂದು ಭಾಷೆಯ ಮಾಡಿತು || ೬೭ ||

ಬರುವೆನೆಂದು ಭಾಷೆ ಮಾಡಿ
ತಪ್ಪೆನೆಂದಾ ಪುಣ್ಯ ಕೋಟಿಯು
ಒಪ್ಪಿಸಲೊಡಂಬಟ್ಟು ವ್ಯಾಘ್ರನು
ಅಪ್ಪೆಯ ತಾ ಕೊಟ್ಟಿತು || ೬೮ ||

ಅಲ್ಲಿಂದ ಕಳುಹಿಸಿಕೊಂಡು
ನಿಲ್ಲದೆ ದೊಡ್ಡಿಗೆ ಬಂದು
ಚೆಲ್ವ ಮಗನನು ಕಂಡು ಬೇಗ
ಅಲ್ಲಿ ಕೊಟ್ಟಿತು ಮೊಲೆಯನು || ೬೯ ||

ಮಗನೆ ಬಾರೊ ಮೊಲೆಯ ಕುಡಿಯೊ
ಹೇಗೆ ಬದುಕಿಯೊ ಏನನರಿಯೆ

ಬೇಗ ಬಾರೊ ಕಂದ ಎನುತಲಿ
ಮಗನ ನೋಡಿಯೆ ಎಂದಳು ॥ ೭೦ ॥

ಕಟ್ಟಕಡೆಯಲಿ ಮೇಯದೀರು
ಬೆಟ್ಟದೊತ್ತಿಗೆ ಹೋಗದಿರು
ದುಷ್ಟ ವ್ಯಾಘ್ರಗಳುಂಟು ಅಲ್ಲಿ
ನಟ್ಟನಡುವೆ ಬಾರಯ್ಯನೆ ॥ ೭೧ ॥

ಇಂದು ಒಂದು ದುಷ್ಟ ವ್ಯಾಘ್ರನು
ತಿಂದೆನೆನುತಲಿ ಬಂದಿತಯ್ಯ
ಕಂದ ನಿನಗೆ ಮೊಲೆಯ ಕೊಡುವೆ
ನೆಂದು ಬಂದೆನು ದೊಡ್ಡಿಗೆ ॥ ೭೨ ॥

ಕೊಂದೆನೆಂಬ ದುಷ್ಟ ವ್ಯಾಘ್ರಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನು ನೋಡಿ ಪೋಗುವೆ
ನೆಂದು ಬಂದೆನು ದೊಡ್ಡಿಗೆ ॥ ೭೩ ॥

ಅಮ್ಮ ನೀನು ಸಾಯಲೇತಕೆ
ಸುಮ್ಮನಿರು ನೀ ಎಲ್ಲಾರಹಾಗೆ
ತಮ್ಮ ತಾಯಿಗೆ ಪೇಳಿ ಕರುವು
ಸುಮ್ಮಾನವಡಗಿ ನಿಂದಿತು ॥ ೭೪ ॥

ಕೇಳಿ ಮಗನ ಬುದ್ಧಿಯನ್ನು
ತಾಳಿ ಹರುಷವ ಸತ್ಯವೆಂದು
ಬಾಳಿ ಬದುಕುವ ಭಾಗ್ಯ ನಿನ್ನದು
ಮುಂದಿರತು ನೀ ಬಾಳ್ಯೆಯಾ ॥ ೭೫ ॥

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ ॥ ೭೬ ॥

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗವು

ಸತ್ಯವಾಕ್ಯಕೆ ತಪ್ಪಿದಾರೆ
ಅಚ್ಯುತಾ ಹರ ಮೆಚ್ಚನು ॥ ೭೭ ॥

ಕೊಟ್ಟ ಭಾಷೆಗೆ ತಪ್ಪಿದಾರೆ
ಸೃಷ್ಟಿಯೊಳು ಶ್ರೀಹರಿಯು ಮೆಚ್ಚನು
ಷ್ಟು ಕಾಲ ಇರುವುದೀ ಕಾಯ
ಕಟಕಟಾ ಕಂದಯ್ಯನೆ ॥ ೭೮ ॥

ಆರ ಮೊಲೆಯಾ ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ಎನಗೆ ಹಿತವರು ॥ ೭೯ ॥

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯಿಯೊಡಹುಟ್ಟುಗಳಿರಾ
ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನ್ನೈದನೆ ॥ ೮೦ ॥

ಮುಂದೆ ಬಂದರೆ ಹಾಯದೀರಿ
ಹಿಂದೆ ಬಂದರೆ ಒದೆಯದೀರಿ
ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನ್ನೈದನೆ ॥ ೮೧ ॥

ಅಮ್ಮ ಕೇಳೆ ಪುಣ್ಯಕೋಟಿಯೆ
ನೀನು ಹೋಗಿ ಸಾಯಲೇತಕೆ
ಬಳಗವೆಲ್ಲವು ಕೂಡಿ ನಿನ್ನ
ಸಂಗಡಲೆ ನಾವ್ ಬರುವೆವು ॥ ೮೨ ॥

ಅಮ್ಮ ನೀವು ಎನ್ನ ಸಂಗಡ
ಬರುವುದೀಗ ಉಚಿತವಲ್ಲ
ಮುನ್ನ ನಾನು ಪಡೆದ ಫಲವಿದು
ಎನ್ನ ಬಿಡುವುದೆ ಎಂದಿತು ॥ ೮೩ ॥

ಅಮ್ಮ ಕೇಳೆ ಪುಣ್ಯಕೋಟಿಯೆ
ನಿನ್ನ ಕಂದನೆ ನಮ್ಮ ಕಂದನು

ನಿನ್ನ ಮನದೊಳು ಖೇದವೇತಕೆ
ನಿರ್ಮಲಾದೊಳಿರಮ್ಮನೆ || ೮೪ ||

ಅಮ್ಮ ನೀವು ಎಲ್ಲರಿರಲು
ಎನ್ನ ಮನದೊಳು ಖೇದವೇತಕೆ
ನಿಮ್ಮ ಕಂದನೆಂದು ಕೊಂಡಿರಿ
ತಬ್ಬಲಿ ಮಗನ್ಯೆದನೆ || ೮೫ ||

ತಬ್ಬಲಿಯಾದೆಲ್ಲೊ ಮಗನೆ
ಹೆಬ್ಬುಲಿಯ ಬಾಯಿಗೆ ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಳು ಕಂದನ || ೮೬ ||

ಅಮ್ಮನೆಂದು ಕರೆವ ಬಾಯಲಿ
ಮಣ್ಣಹಾಕಿದ ಶಿವನು ಎನುತಲಿ
ಎನ್ನ ಪುಣ್ಯದ ಭಾಗ್ಯವನ್ನು
ಯಾರಿಗೆಯು ನಾನುಸುರಲಿ || ೮೭ ||

ನಿನ್ನ ಬಸುರಲಿ ಏಕೆ ಹುಟ್ಟಿದೆ
ಅನ್ಯಕಾರಿ ಪಾಪಿ ನಾನು
ಇನ್ನು ಅಮ್ಮನೆನುತ ಯಾರನು
ಎನ್ನ ಪ್ರೇಮದಿ ಕರೆಯಲಿ || ೮೮ ||

ಕಂದ ನಿನಗೆ ದುಃಖವೇತಕೆ
ಚೆಂದದಿಂದ ಬಾಳು ಧರೆಯೊಳು
ಮುನ್ನ ಜನ್ಮದ ಪಡೆದ ಫಲವಿದು
ಎನ್ನ ಬಿಡುವುದೆ ಎಂದಿತು || ೮೯ ||

ಕಂದನೀಗೆ ಬುದ್ಧಿ ಹೇಳಿ
ಬಂದಳಾಗ ಪುಣ್ಯಕೋಟಿಯು
ಚೆಂದದಿಂದ ಪುಣ್ಯನದಿಯೊಳು
ನಿಂದು ಸ್ನಾನವ ಮಾಡಿತು || ೯೦ ||

ಗೋವು ಸ್ನಾನವ ಮಾಡಿಕೊಂಡು
ಗವಿಯ ಬಾಗಿಲ ಪೊಕ್ಕು ನಿಂತು

ಸಾವಕಾಶವ ಮಾಡದಂತೆ
ವ್ಯಾಘ್ರರಾಯನ ಕರೆದಳು || ೯೧ ||

ಅಣ್ಣ ಬಾರೋ ಹುಲಿಯ ರಾಯನೆ
ಹಸಿದೆಯೆಲ್ಲೋ ದೋಷ ಬಂದಿತು
ಎನ್ನ ಆಹಾರವನು ಬೇಗನೆ
ಕೊಳ್ಳೆಲೋ ಹುಲಿರಾಯನೆ || ೯೨ ||

ಖಂಡವಿದೆ ಕೊ ರಕ್ತವಿದೆ ಕೊ
ಗುಂಡಿಗೆಯ ಕೊಬ್ಬುಗಳಿವೆ ಕೋ
ಉಂಡು ಸಂತಸಗೊಂಡು ನೀ ಭೂ
ಮಂಡಲದೊಳು ಬಾಳಯ್ಯನೆ || ೯೩ ||

ಪುಣ್ಯಕೋಟಿಯು ಬಂದು ನುಡಿಯೆ
ತನ್ನ ಮನದೊಳು ಹುಲಿಯರಾಯನು
ಕನ್ನೆಯಿವಳನು ಕೊಂದು ತಿಂದರೆ
ಎನ್ನ ನರಹರಿ ಮೆಚ್ಚನು || ೯೪ ||

ಎನ್ನ ಒಡಹುಟ್ಟಕ್ಕ ನೀನು
ನಿನ್ನ ತಿಂದು ನಾನೇನ ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು || ೯೫ ||

ಮುನ್ನ ನೂರು ಗೋವ ಕೊಂದ
ಅನ್ಯಕಾರಿ ಪಾಪಿ ನಾನು
ಇನ್ನು ಇರಿಸಲು ಏಕೆ ಪ್ರಾಣವ
ಬಿಡುವೆನೆಂದು ಪೇಳಿತು || ೯೬ ||

ಅಮ್ಮ ನೀನು ಸತ್ಯವಂತೆಯು
ನಿನ್ನ ದರುಶನ ಮಾತ್ರದಿಂದಲಿ
ನಾನು ಪೂರ್ವದಿ ತಂದ ಫಲವು
ಇಂದು ಪರಿಹರವಾಯಿತು || ೯೭ ||

ಯಾಕಯ್ಯ ಹುಲಿರಾಯ ಕೇಳು
ಜೋಕೆಯಿಂದಲಿ ಎನ್ನನೊಲ್ಲದೆ

ನೂಕಿ ನೀನು ಸಾಯಲೇತಕೆ
ಬೇಕೆಂದು ನಾ ಬಂದೆನು ॥ ೯೮ ॥

ನಿನ್ನ ಪ್ರಾಣವ ತೊರೆಯಲೇತಕೆ
ಕನ್ನೆಯನ್ನನು ತಿಂದು ಬದುಕದೆ
ಮುನ್ನ ನಿನ್ನಯ ತೃಷೆಯ ಸಲಹಿಕೊ
ಪನ್ನಗ ಶಯನೀಗೆ ಪ್ರಿಯವು ॥ ೯೯ ॥

ಪುಣ್ಯಕೋಟಿಯ ಮಾತ ಕೇಳಿ
ಕಣ್ಣಿನೊಳಗೆ ನೀರ ಸುರಿಯುತ
ಅನ್ಯಕಾರಿಯು ತಾನು ಎನುತಲಿ
ತನ್ನ ಮನದೊಳು ಧ್ಯಾನಿಸಿ ॥ ೧೦೦ ॥

ಮೂರು ಮೂರ್ತಿಗೆ ಕೈಯ ಮುಗಿದು
ಸೇರಿ ಎಂಟು ದಿಕ್ಕನೋಡಿ
ಹಾರಿ ಆಕಾಶಕ್ಕೆ ನೆಗೆದು
ತನ್ನ ಪ್ರಾಣವ ಬಿಟ್ಟಿತು ॥ ೧೦೧ ॥

ಹರಿಯು ಮೆಚ್ಚಿದ ಹರನು ಮೆಚ್ಚಿದ
ಬ್ರಹ್ಮದೇವನು ತಾನು ಮೆಚ್ಚಿದ
ಸುರರು ಪೂಮಳೆಗರೆದು ಬೇಗದಿ
ಕರುಮದಿಂದಲಿ ಇರುವರು ॥ ೧೦೨ ॥

ಬ್ರಹ್ಮಪ್ರಾಣವ ಕರೆದುಕೊಂಡ
ಹರನು ಪುಲಿಯ ಚರ್ಮ ಪೊದ್ದನು
ಹರನು ಹಸುವನು ಮನ್ನಿಸಿಯೇ ಬೇಗ
ತಿರುಗಿ ಕಳುಹಿದ ದೊಡ್ಡಿಗೆ ॥ ೧೦೩ ॥

ಆಗ ತಮ್ಮಾ ಬಳಗವೆಲ್ಲಾ
ಬೇಗದಿಂ ಸಂತೋಷಗೊಂಡು
ಹೇಗೆ ಬಂದೆಯೆ ಪುಣ್ಯಕೋಟಿಯೆ
ಈಗ ನೀನತಿ ಶೀಘ್ರದಿ ॥ ೧೦೪ ॥

ಹುಲಿಗೆ ಮೋಕ್ಷವ ಕೊಟ್ಟು ಶಿವನು
ಸಲಹಿ ಎನ್ನನು ಬಿಡಿಸಿದಾನು

ನಲಿದು ಬಂದೆನು ಮರಳಿ ದೊಡ್ಡಿಗೆ
ಗೆಲುವಿನಿಂದಲಿ ಈಗಲು ॥ ೧೦೫ ॥

ಎಂದ ವಾಕ್ಯವ ಕೇಳಿ ಪಶುಗಳು
ಚೆಂದದಿಂದ ನಲಿದು ನೆಗೆಯುತ
ಇಂದುಧರ ಅರವಿಂದನಾಭ ಗೋ
ವಿಂದ ಎನುತಲಿ ನಲಿದವು ॥ ೧೦೬ ॥

ಗೊಲ್ಲ ಗೌಡನು ತಾನು ಬಂದು
ಪುಣ್ಯಕೋಟಿಯ ಪಾದಕೆರಗಿದ
ಉನ್ನತದ ಸೌಭಾಗ್ಯವೀಯೆಂದು
ಚೆನ್ನಾಗಿ ತಾ ಕೇಳಿದ ॥ ೧೦೭ ॥

ಪುಣ್ಯಕೋಟಿಯು ನಲಿದು ಕರುವಿಗೆ
ಪುಣ್ಯಕಾರಿ ಎನುತ ಬೇಗದಿ
ಚೆನ್ನ ಗೌಡನ ಕಂಡು ತಾನು
ಉನ್ನತಾದಿಂದೆಂದಿತು ॥ ೧೦೮ ॥

ಎನ್ನ ವಂಶದ ಗೋವ್ಗಳೊಳಗೆ
ನಿನ್ನ ವಂಶದ ಗೊಲ್ಲರೊಳಗೆ
ಮುನ್ನ ಸಂಕ್ರಾಂತಿ ಹಬ್ಬದೊಳಗೆ
ಚೆನ್ನ ಕೃಷ್ಣನ ಭಜಿಸಿಯೆ ॥ ೧೦೯ ॥

ಪಾಲು ಪೊಂಗಲನಿಕ್ಕಿಸಯ್ಯ
ಬಾಲ ಗೋವ್ಗಳ ಕೂಡಿ ಸಾಗಲು
ಲೋಲ ಕೃಷ್ಣನು ನಿಮಗೆ ಒಲಿವನು
ಪಾಲಿಸೆನ್ನಯ ವಾಕ್ಯವಾ ॥ ೧೧೦ ॥

ಪುಣ್ಯಕೋಟಿಯು ಮಾತುಕೇಳಿ
ಗೊಲ್ಲಗೌಡನು ತಾನು ಬೇಗದಿ
ಪುಣ್ಯನದಿಯೊಳು ಮಿಂದು ಬಂದು
ಆಗ ಹಬ್ಬವ ಮಾಡಿದ ॥ ೧೧೧ ॥

ನಮ್ಮ ವಂಶಕೆ ವರುಷಕೊಂದು
ಸಂಕರಾತ್ರಿಯ ಹಬ್ಬದೊಳಗೆ

ಪಾಲುಪೊಂಗಲ ಮಾಳ್ಪೆವೆಂದು
ಆಗ ಹಬ್ಬವ ಮಾಡಿದ ॥ ೧೧೨ ॥

ಗೋವು ಹೇಳಿದ ಪುಣ್ಯಕಥೆಗಳ
ಹೇಳಿದವರಿಗೆ ಕೇಳಿದವರಿಗೆ
ಈವ ಅಚ್ಯುತ ಸೌಭಾಗ್ಯ ಸಂಪದ
ಆವಕಾಲಕೆ ತೆಗೆಯದ ॥ ೧೧೩ ॥

ಪದ್ಮನಾಭನೆ ಪರಂಧಾಮನೆ
ಮದ್ದೂರ ಶ್ರೀನಾರಸಿಂಹನೆ
ಮುದ್ದು ವರಗಳ ಕೊಡುವ ನಿಮಗೆಯು
ನಮೋ ನಮೋ ಮಂಗಳಂ ॥ ೧೧೪ ॥

ಅಜ್ಞಾತ ಜಾನಪದ ಕವಿ

ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು
ಜೋಳವನು ತಿಂಬುವನು ತೋಳನಂತಾಗುವನು
ನವಣೆಯನು ಉಂಬುವನು ಹವಣಾಗಿ ಇರುತಿಹನು
ರಾಗಿಯನು ಉಂಬುವನು ನಿರೋಗಿ ಎಂದೆನಿಸುವನು ॥
ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ದ್ಯ ಬಲ್ಲವಗೆ ಭಯವುಂಟೆ—ದೇವರೆ
ಮದ್ದುಂಟೆ ಜನನ ಮರಣಕ್ಕೆ ॥

ಸಂಕ್ಷಿಪ್ತ ಪೂಜಾ ವಿಧಿ

(ಸಂಸ್ಕೃತ ಶ್ಲೋಕಗಳು- ಕನ್ನಡ ಭಾವಾನುವಾದ ಪದ್ಯಗಳು)

ಶಿಕಾರಿಪುರ ಹರಿಹರೇಶ್ವರ

ನಂ.೪, ೩ನೇ ಮೈನ್, ೫ನೇ ಕ್ರಾಸ್, ಸರಸ್ವತೀಪುರಂ

ಮೈಸೂರು-೫೭೦ ೦೦೯ ಫೋನ್: ೦೮೨೧- ೨೫೪೪ ೮೪೧

೧. ಪೂಜಾ ಸಿದ್ಧತೆ; ಶಾಂತಿಮಂತ್ರ ಪಠನ

(ಪೂಜೆ ಮಾಡುವವರು ಶುಚಿರ್ಭೂತರಾಗಿ (ಸ್ನಾನ ಮಾಡಿಕೊಂಡು ಅಥವಾ ಕೈ ಕಾಲು ಮುಖಗಳನ್ನು ಚೆನ್ನಾಗಿ ತೊಳೆದುಕೊಂಡು), ಶುಭ್ರವಾದ ಬಟ್ಟೆಗಳನ್ನು ಧರಿಸಿಕೊಂಡು, ಪೂಜಾ ಸ್ಥಳಕ್ಕೆ ಬಂದು ಕುಳಿತುಕೊಳ್ಳಬೇಕು. ತಮ್ಮ ಎದುರಿಗೆ ದೇವರ ಪ್ರತಿಮೆ ಅಥವಾ ದೇವರ ಚಿತ್ರವನ್ನೂ, ಪೂಜಾ ಸಾಮಗ್ರಿಗಳನ್ನು ತಮ್ಮ ಹತ್ತಿರ ಇರಿಸಿಕೊಂಡಿರಬೇಕು)

ಓಂ ಭದ್ರಂ ಕರ್ಣೇಭಿ: ಶ್ರುಣುಯಾಮ ದೇವಾ:,
ಭದ್ರಂ ಪಶ್ಯೇಮ ಅಕ್ಷಭಿರ್ ಯಜತ್ರಾ:।
ಸ್ಥಿರೈರ್ ಅಂಗೈರ್ ತುಷ್ಟುವಾಂಸ್ ತನೂಭಿ:,
ವ್ಯಶೇಮ ದೇವಹಿತಂ ಯದ್ ಆಯು:॥೧।

ಕಿವಿಗೆ ಬೀಳಲಿ ಶುಭದ ವಾರ್ತೆಗಳೇ, ದೇವರೇ,
ಪೂಜೆಯಲಿ ತೊಡಗಿದ ನಮಗೆ ಶುಭ ಕಾಣಲಿ;
ದೃಢಕಾಯರಾಗಿರುತ ಅವನು ಮೆಚ್ಚುವ ರೀತಿ
ಬಾಳ ನಡೆಸುವ ಕನಸೆಲ್ಲ ನನಸಾಗಲಿ॥೧॥

೨. ದೀಪ ಪ್ರಜ್ವಲನೆ

(ಕಾರ್ಯಕ್ರಮ ಪ್ರಾರಂಭದಲ್ಲಿ, ಪೂಜಾ ಮಂಟಪದಲ್ಲಿ ದೀಪವನ್ನು ಹಚ್ಚುವಾಗ ಆ ದೀಪಗಳಿಗೆ ನಮಸ್ಕರಿಸುತ್ತಾ ಹೀಗೆ ಹೇಳಿಕೊಳ್ಳಬೇಕು.)

(೧) ಭೋ ದೀಪ, ದೇವಿರೂಪಸ್ ತ್ವಂ
ಕರ್ಮಸಾಕ್ಷೀ ಹಿ ಅವಿಘ್ನಕೃತ್।

ಯಾವತ್ ಪೂಜಾ ಸಮಾಪ್ತಿಸ್ ಸ್ಯಾತ್,
ತಾವತ್ ತ್ವಂ ಸುಸ್ಥಿರೋ ಭವ॥೨॥
ಬೆಳಕ ಬೀರುವ ದೀಪ, ನೀನು ದೇವಿ ಸ್ವರೂಪ,
ಬಾರೆ, ಬಾ, ನಾ ಮಾಡುವುದೆಲ್ಲವನು ಕಣ್ಣಾರೆ ನೋಡು!
ತುಂಬು ಕರುಣೆಯ ತೋರು, ಸ್ಥಿರವಾಗಿ ನೀ ನೆಲಸು,
ಅಡೆತಡೆಗಳಿಲ್ಲದೆ ಪೂಜೆ ಕೊನೆಗೊಳ್ಳಲೆ-ಂದು ಹರಸು॥೨॥

(೨) ವಿಚ್ಛಿದ್ಧ್ಯ ಅಜ್ಞಾನ-ತಿಮಿರಂ ಘೋರಂ ಅಂಧಕಾರಂ ಮಮ।
ಉನ್ಮೀಲಯ ಅಂತಃಚಕ್ಷುಃ, ಹೇ ದೀಪ, ದಯಾನಿಧೇ॥೩॥
ತಲೆಯ ದಟ್ಟ ಕತ್ತಲೆಯ ಕತ್ತರಿಸಿ ಕೊಚ್ಚಿ ಭಿಡು,
ಕಳೆ ಕೊಳೆಯ ತೊಳೆದು ಬಿಡು ಏನುಳಿಯದನಕ;
ಒಳಗಣ್ಣ ತೆರಸು ಬಾ, ತುಂಬು ಕರುಣೆಯ ಕಡಲೇ,
ಕಾಣ ತವಕಿಸುತಿಹೆ ನಾ, ತೋರು ನಿಜದ ಬೆಳಕ!॥೩॥

* * *

(೩) ದೀಪಂ ಜ್ಯೋತಿ ಪರಬ್ರಹ್ಮಾ,
ದೀಪಂ ಜ್ಯೋತಿ ಜನಾರ್ದನ।
ದೀಪೇನ ಹರತೇ ಪಾಪಂ,
ತಸ್ಮಾತ್ ದೀಪಂ ನಮೋಸ್ತು ತೇ॥೪॥
ಹುಟ್ಟು ಉಳಿವು ಅಳಿವಿನ ರೂಪ, ದೀಪವೇ, ಮುನ್ನ,
ಅರಿಯದೆಯೇ ನಾ ಎಸಗಿರಬಹುದು ತಪ್ಪು ಕೆಲವನ್ನ;
ತಿಳಿದೊ ತಿಳಿಯದೆಯೋ ಆದ ಆಗುವ ಎಲ್ಲ ನನ್ನ
ತಪ್ಪುನೆಪ್ಪುಗಳನೊಪ್ಪಿ ಮನ್ನಿಸಿ ತೋರು ಬೆಳಕನ್ನ!॥೪॥

೩. ಘಂಟಾನಾದ; ಶುಮುಹೂರ್ತ ಘೋಷಣೆ:

(ನೆನೆದಾಗಲೆಲ್ಲ ಬರುವ ದೇವರ ಪೂಜೆಗೆ ನಾವು ಆರಿಸಿಕೊಂಡ ಈ ಸಮಯವೇ ಪ್ರಶಸ್ತವಾದ ಮುಹೂರ್ತ ಎಂದು ಭಾವಿಸಿಕೊಂಡು, ಪೂಜೆಯನ್ನು ಪ್ರಾರಂಭಿಸಬೇಕು. ಪೂಜೆ ಕಡೆಯೇ ಗಮನವನ್ನು ಸೆಳೆಯಲು,

ಒಂದು ಅನುಕೂಲಕರ ವಾತಾವರಣವನ್ನು ಕಲ್ಪಿಸಿಕೊಳ್ಳಲು ಘಂಟೆಯನ್ನು ಬಾರಿಸಬೇಕು.)

(೧) ಆಗಮಾರ್ಥಂತು ದೇವಾನಾಂ, ಗಮನಾರ್ಥಂತು ರಕ್ಷಸಾಂ।
ಕುರ್ವೇ ಘಂಟಾರವಂ ತತ್ರ, ದೇವತಾಹ್ವಾನ ಲಾಂಛನಮ್॥೫॥

ಶಿಷ್ಟಶಕ್ತಿಗಳಿತ್ತ ನಮ್ಮತ್ತ ಬರಲೆಂದು, ಇರಲೆಂದು,
ದುಷ್ಟಶಕ್ತಿಗಳತ್ತ ಅತ್ತ ದೂರ ಹೊಗಲೆಂದು ದೂಡಿ,
ಘಂಟೆಯನು ಬಾರಿಸುವೆ, ಬರಮಾಡಿಕೊಳಲಿರುವೆ
ಸ್ವಾಗತದ ಸೂಚನೆಯ ನಿಮಗೆ, ದೇವ, ಹೀಗೆ ನೀಡಿ!॥೫॥

*   *   *

(೨) ತದೇವ ಲಗ್ನಂ, ಸುದಿನಂ ತದೇವ, ತಾರಾಬಲಂ ಚಂದ್ರಬಲಂ ತದೇವ।
ವಿದ್ಯಾಬಲಂ ದೈವಬಲಂ ತದೇವ, ಲಕ್ಷ್ಮೀಪತೇ ತೇಽಂಘ್ರಿಯುಗಂ ಸ್ಮರಾಮಿ ॥೬॥

ಈ ದಿನವೇ ಶುಭದಿನವು, ಈ ಸಮಯ ಶುಭಲಗ್ನ;
ಬಂದು ಒದಗಿಹುದೀಗ ನಕ್ಷತ್ರ ಚಂದ್ರ ಯೋಗ ತಾವೇ;
ಅರಿವಿನೊಂದಿಗೆ ಕೂಡಿ ಜೊತೆಗಿಹುದು ದೈವಬಲ-
ನಿನ್ನ ತಾವರೆಯಡಿಗಳ ನೆನೆಯಲವು ಮೇಳೈಸದಿಹವೇ?॥೬॥

*   *   *

೪. ಪೂಜಾ ಪ್ರಾರಂಭದ ಪ್ರಾರ್ಥನೆಗಳು: ಗಣೇಶ ಪ್ರಾರ್ಥನೆ

(ಯಾವುದೇ ವಿಶೇಷ ಪೂಜೆಯ ಮೊದಲು ಗಣೇಶ, ಸರಸ್ವತಿ, ಲಕ್ಷ್ಮಿ, ಗೌರಿ, ಕುಲದೇವತೆ ಮತ್ತು ಇಷ್ಟ-ದೇವತೆಗಳನ್ನ ಪ್ರಾರ್ಥಿಸುವುದು ಸಂಪ್ರದಾಯ. ಜೊತೆಗೆ ನಮ್ಮ ತಿಳಿವಳಿಕೆ ಹೆಚ್ಚಿಸಿದ ಎಲ್ಲ ಗುರುಗಳನ್ನ ನೆನೆವುದೂ ಮುಖ್ಯ.)

(೧) ಶುಕ್ಲ–ಅಂಬರ–ಧರಂ ವಿಷ್ಣುಂ, ಶಶಿವರ್ಣಂ ಚತುರ್ಭುಜಮ
ಪ್ರಸನ್ನ–ವದನಂ ಧ್ಯಾಯೇತ್, ಸರ್ವ ವಿಘ್ನ–ಉಪಶಾಂತಯೇ॥೭

ಬಿಳಿಯ ಬಟ್ಟೆಯ ಧರಿಸಿ ಮೆರೆವನೆ,
ಚಂದ್ರನಂದದಿ ಸುಂದರಾಂಗನೆ,
ಪಾಶ ಅಂಕುಶಗಳನು ಹಿಡಿದಿಹ ನಾಲ್ಕು ಕೈಗಳುಳ್ಳವನೆ।
ನಗುಮೊಗನೆ ಗಣದೊಡೆಯ ಬೆನಕನೆ.
ನಡೆವ ದಾರಿಯು ನಡುವೆ ಇರುತಿಹ
ಅಡೆ ತಡೆಗಳೆಲ್ಲವನು ತೊಡೆಯುತ ನೀನೇ ಕಾಪಾಡು॥೭॥

* * *

(೨) ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ।
ನಿರ್ವಿಘ್ನಂ ಕುರು ಮೇ ದೇವ, ಸರ್ವಕಾರ್ಯೇಷು ಸರ್ವದಾ॥೮

ಸುತ್ತಿಕೊಂಡಿಹ ಸೊಂಡಿಲಿನ ಮುಖ, ದೊಡ್ಡ ದೇಹದ ಬೆನ
ಕೋಟಿ ಕೋಟಿ ಚಂಡಕಿರಣರ ಪ್ರಭೆಯ ದಿವ್ಯ ರೂಪ;
ನಾವೆಸಗುವೆಲ್ಲ ಕೆಲಸದ ಬೆಂಬಲಕೆ ನಿಂತು ಹರಸುತ ಸತತ
ಅಡೆತಡೆಗಳೇನೂ ಇರದಂತೆ ನೋಡಿಕೋ, ಗಣಪ! ॥೮॥

೩. ಸರಸ್ವತೀ ಪ್ರಾರ್ಥನೆ

ಯಾ ಕುಂದೇಂದು ತುಷಾರಹಾರಧವಲಾ, ಯಾ ಶುಭ್ರವಸ್ತ್ರಾನ್ವಿತಾ।
ಯಾ ವೀಣಾ ವರದಂಡ ಮಂಡಿತಕರಾ, ಯಾ ಶ್ವೇತ ಪದ್ಮಾಸನಾ।
ಯಾ ಬ್ರಹ್ಮ ಅಚ್ಯುತ ಶಂಕರ ಪ್ರಭೃತಿಭಿಃ ದೇವೈಃ ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷ ಜಾಡ್ಯಾಪಹಾ॥೯॥

ಹಿಮ ಮಾಲೆಯಂದದ ಬಿಳಿದಾವರೆಯ ಸೊಬಗಿನ ಖಣಿಯೆ
ಬಿಳಿಯಕಮಲದಿ ಕುಳಿತೆ, ಅಜ ಹರಿ ಹರ ಸುರಾದಿ ವಿನುತೆ
ವೀಣೆ ಕೈಗೆತ್ತಿಕೊಂಡವಳೆ, ಬಿಳಿಯುಡುಗೆ ತೊಟ್ಟವಳೆ,
ಕಾಪಾಡು ಬಾ ವಾಣಿ, ತೊಡೆದು ನನ್ನೆಲ್ಲ ಮನದ ಜಡತೆ.

೬. ಲಕ್ಷ್ಮೀ ಪ್ರಾರ್ಥನೆ

ಸರಸಿಜ ನಿಲಯೇ ಸರೋಜಹಸ್ತೇ,
ಧವಳತಮ ಅಂಶುಕ ಗಂಧಮಾಲ್ಯ ಶೋಭೇ।
ಭಗವತಿ ಹರಿವಲ್ಲಭೇ ಮನೋಜ್ಞೇ,
ತ್ರಿಭುವನ ಭೂತಿಕರಿ ಪ್ರಸೀದ ಮಹ್ಯಮ್॥೧೧॥

ಕಮಲದಲಿ ಮನೆಮಾಡಿ, ತಾವರೆಯ ಕೈಯಲಿ ಹಿಡಿದು,
ಬೆಳ್ಳಿ ಬಿಳಿ ಅಂಶುಕ ಗಂಧಮಾಲೆಯ ಧರಿಸಿ ಮೆರೆವೆ;
ಮೂಲೋಕದೊಡತಿಯೆ ಸಿರಿಯೆ, ಮಂಗಳದ ಮಳೆಗರೆವೆ,
ಹರಿಯ ವರಿಸಿಹ, ಲಕ್ಷ್ಮಿ, ನೀ ನಲಿದೊಲಿಯೆ, ಶುಭದೆ!

೭. ಗೌರೀ ಪ್ರಾರ್ಥನಾ

ಓಂಕಾರ ಪಂಜರ ಶುಕೀಂ, ಉಪನಿಷದ್ ಉದ್ಯಾನ ಕೇಲೀ ಕಲಕಂಠೀಂ।
ಆಗಮ ವಿಪಿನ ಮಯೂರೀಂ, ಆರ್ಯಾಂ, ಅಂತರ್ ವಿಭಾವಯೇ
ಗೌರೀಮ್॥೧೧॥

ಓಂಕಾರ ಪಂಜರದಲ್ಲಿ ಸೆರೆಯಾಳೆ ಆಗಿಹ ಗಿಳಿ ಬಾಲೆ,
ಆಗಿ ಕೋಗಿಲೆ ಉಪನಿಷತ್ತುದ್ಯಾನದಲಿ ವಿಹರಿಸುತಲಿರುವೆ;
ವೇದ ಆಗಮ ವನದಿ ಕುಣಿದು ನಲಿದಾಡುತಿಹ ನವಿಲೆ,
ತಾಯೆ, ಗೌರಿಯೇ, ಮನಸಲೆ ನಿನ್ನ ನಾ ನೆನೆಯುತಿರುವೆ.

೮. ಗುರು ಪ್ರಾರ್ಥನಾ

(ಮರುಹುಟ್ಟನ್ನು ಕೊಟ್ಟ ಗುರುವೇ ನಿಜಕ್ಕೂ ಜನ್ಮವೀವ ಬ್ರಹ್ಮ; ಪೋಷಣೆಗೆ ಕಾರಣವಾದ ವಿದ್ಯೆಯನ್ನಿತ್ತ ಗುರುವೇ ಕಾಪಾಡುವ ವಿಷ್ಣು; ಕೆಟ್ಟದ್ದೆಲ್ಲವನ್ನೂ ಅಳಿಸಿಹಾಕುವ ಸಾಮರ್ಥ್ಯವುಳ್ಳ ಜ್ಞಾನವನ್ನಿತ್ತ ಗುರುವೇ ಲಯಕರ್ತೃ ಮಹೇಶ್ವರ; ಸಾಕ್ಷಾತ್ ಪರಮಾತ್ಮಸ್ವರೂಪಿಯೆಂದರೆ ಅದು ಗುರುವೇ!–ಹೀಗೆ, ತ್ರಿಮೂರ್ತಿಸ್ವರೂಪನಾದ ಗುರುವಿಗೆ ನಮ್ಮ ಹೃತ್ಪೂರ್ವಕ ನಮನಗಳು!)

ಗುರುರ್ ಬ್ರಹ್ಮಾ ಗುರುರ್ ವಿಷ್ಣುಃ ಗುರುರ್ ದೇವೋ ಮಹೇಶ್ವರಃ।
ಗುರುಸ್ ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀ ಗುರವೇ ನಮಃ॥೧೨॥

ನೀ ಬ್ರಹ್ಮ, ನೀ ವಿಷ್ಣು, ನೀನೇ ದೇವರ ದೇವ
ಮಹತ್ತಿಗೂ ಮಹತ್ತಾದ ಅರಿವಿನಾಚೆಯ ದಿವ್ಯ ಬೆರಗೆ;
ಎದುರು ಮೈದೋರಿದ ಗುರುವೆ, ನೀನೆ ಪರಮಾತ್ಮ-
ತಲೆ ಬಾಗಿ ಪೊಡಮಡುವೆ ಬೆಳಕೆಡೆಗೆ ಒಯ್ದ ನಿನಗೆ!॥೧೨॥

೬. ಕುಲದೇವತಾ/ ಇಷ್ಟದೇವತಾ ಪ್ರಾರ್ಥನೆ

(ನಿಮ್ಮ ಕುಲದೇವತೆಯ/ ಇಷ್ಟದೇವತೆಯ ಪ್ರಾರ್ಥನೆಯನ್ನು ಮಾಡಿರಿ)

(೧) ತೋಯೇ ಶೈತ್ಯಂ, ದಾಹಕತ್ವಂ ಚ ವಹ್ನೌ
ತಾಪೋ ಭಾನೌ, ಶೀತಭಾನೌ ಪ್ರಸಾದ: ।
ಪುಷ್ಪೇ ಗಂಧೋ, ದುಗ್ಧಮಧ್ಯೇऽಪಿ ಸರ್ಪಿರ್,
ಯತ್ ಯತ್, ಶಂಭೋ, ತ್ವಂ ತತಸ್, ತ್ವಾಂ ಪ್ರಪದ್ಯೇ ॥೧೩॥

ನೀರಿನಲಿ ಇನಿ ತಂಪು, ಬೆಂಕಿಯಲಿ ಉರಿ ಕೆಂಪು,
ಹೂವಿನಲಿ ಘಮಘಮಿಪ ಮನಸೆಳೆವ ಕಂಪು,
ಸುಡು ತಾಪ ರವಿಯಲ್ಲು, ಚಂದ್ರನಲಿ ತಂಬೆಳಕು,
ಹಾಲಿನೊಳಗಡೆ ತುಪ್ಪವಿರುವಂತೆ ಹುದುಗಿ-
ಸೇರಿ ನನ್ನೊಳಗೇ ಇರು ನೀನು, ಬೇರಾಗದೆ!
ಬೇಡಿ ಹಾಡುವೆ, ಶಿವನೆ, ನಾ ಮನದಣಿಯದೆ॥೧೩॥

* * *

(೨) ಶಾಂತಾಕಾರಂ ಭುಜಗಶಯನಂ, ಪದ್ಮನಾಭಂ ಸುರೇಶಂ।
ವಿಶ್ವಾಧಾರಂ ಗಗನಸದೃಶಂ, ಮೇಘವರ್ಣಂ ಶುಭಾಂಗಮ್।
ಲಕ್ಷ್ಮೀಕಾಂತಂ ಕಮಲನಯನಂ, ಯೋಗಿಭಿರ್ ಧ್ಯಾನಗಮ್ಯಂ।
ವಂದೇ, ವಿಷ್ಣುಂ, ಭವಭಯಹರಂ,ಸರ್ವಲೋಕೈಕನಾಥಮ್॥೧೪॥

ಶಾಂತತೆಯೆ ಮೈವೆತ್ತವನೆ, ಸುಮನಸರೊಡೆಯ, ಸಿರಿಯರಸ,
ಹೊಕ್ಕಳಲಿ ಹೂವಾಂತು, ಜಗವನ್ನೇ ಹೊತ್ತು ಸಲಹುವ ಕೀರ್ತಿ,

ಹಾವೇ ಹಾಸಿಗೆಯಾದ, ಅಳತೆಗಳವಡದ ಅನಂತ ನೀಲಾಕಾಶ,
ಮೋಡದೊಲು ಮೈಬಣ್ಣ, ತಾವರೆಗಣ್ಣ, ಮಂಗಳಮೂರ್ತಿ,
ಮುಳಗಿ ಧ್ಯಾನದಲಿರುವ ಯೋಗಿ ಮನದಲಿ ಮೂಡುವ ಬೆರಗೆ,
ಹುಟ್ಟಿರವು ಸಾವಿನ ಸಂಸಾರಭಯ ಇಲ್ಲವಾಗಿಸುವವನೆ, ಹರಿಯೆ,
ಪೊಡಮೊಡುವೆ ಕಾಪಾಡು, ಮೂಲೋಕದೊಡೆಯ ನೀನೇ
॥೧೪॥

೧೦. ಸಂಕಲ್ಪ:

ಓ ಭೂರ್ ಭುವ: ಸುವ:,
ಓಂ ತತ್ ಸವಿತ್ರು ವರೇಣ್ಯಂ, ಭರ್ಗೋ ದೇವಸ್ಯ ಧೀಮಹಿ।
ಧಿಯೋ ಯೋ ನ: ಪ್ರಚೋದಯಾತ್॥೧೫॥

ಆ ದೇವನತಿ ಭವ್ಯ, ದಿವ್ಯ ತೇಜೋಮಯ
ಸೂರ್ಯಸ್ವರೂಪಿ ನಮಗೊಲಿಯಲಿ;
ನಮ್ಮ ಬುದ್ಧಿಗಳನವ ಅನವರತ ಪ್ರಚೋದಿಸುತ್ತಲಿರಲಿ॥೧೫॥

೧೧. ಸಂಕ್ಷಿಪ್ತ ಷೋಡಶೋಪಚಾರ ಪೂಜಾ:

(ದೇವರಿಗೆ ಷೋಡಶ (ಅಂದರೆ ಹದಿನಾರು) ಘಟ್ಟಗಳಲ್ಲಿ ಉಪಚರಿಸುವ ವಿಧಾನದಲ್ಲಿ ಪೂಜೆಯನ್ನು ಮಾಡುವುದು ನಮ್ಮ ಸಂಪ್ರದಾಯ. ಇವು ಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿದ್ದರೂ, ಎಲ್ಲರಿಗೂ ಸಾಮಾನ್ಯವಾಗಿ ಪರಿಚಿತವಿರುವ ಈ ಹಂತಗಳು ಹೀಗಿವೆ: ಧ್ಯಾನ, ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನೀಯ, ಸ್ನಾನ, ವಸ್ತ್ರಾರ್ಪಣ, ಗಂಧ, ಪತ್ರ-ಪುಷ್ಪ ಅರ್ಚನೆ, ಧೂಪ, ದೀಪ, ನೈವೇದ್ಯ, ಮಂಗಳಾರತಿ, ಪ್ರದಕ್ಷಿಣ, ನಮಸ್ಕಾರ- ಈ ಬಗೆಯುಲ್ಲಿ ಪೂಜೆ ಮಾಡುತ್ತೇವೆ)

೧೨. ಸಂಕ್ಷಿಪ್ತ ನವಗ್ರಹ ಪೂಜಾ

(ಆಕಾಶಕಾಯಗಳಾದ ಸೂರ್ಯ ಮತ್ತು ಚಂದ್ರರಂತೆ ದೂರ ದೂರ ದಲ್ಲಿರುವ ಇನ್ನಿತರ ಗ್ರಹಗಳೂ ನಮ್ಮ ಮೇಲೆ ಪ್ರಭಾವ ಬೀರುತ್ತವೆ- ಎಂಬ ನಂಬಿಕೆಯಿಂದ ಈ ಗ್ರಹಗಳ ಆರಾಧನೆ ನಡೆಯುತ್ತದೆ. ಛಾಯಾ ಗ್ರಹಗಳ ಪ್ರಭಾವವೂ ಸಾಕಷ್ಟು ಇದೆಯೆಂಬ ನಂಬಿಕೆಯ ಮೇಲೆ ರಾಹು

ಮತ್ತುಕೇತುಗಳನ್ನು ಉಳಿದ ಗ್ರಹ-ಗಳೊಂದಿಗೆ ಸೇರಿಸಿಕೊಂಡು ನವಗ್ರಹ ಪೂಜೆ ಮಾಡುತ್ತೇವೆ.)

ನಮಸ್ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ।
ಗುರುಶುಕ್ರ ಶನಿಭ್ಯಶ್ ಚ ರಾಹವೇ ಕೇತವೇ ನಮಃ॥೧೬॥

ಬೆಂಗದಿರ, ತಂಗದಿರ, ಭೂಮಿಯಣುಗನೆ, ಬುಧನೆ
ಗುರುವೆ, ಬೆಳ್ಳಿಯ ಮಿನುಗೆ, ಮಂದಚರನೇ,
ರಾಹು ಕೇತುಗಳೆಂಬ ದಟ್ಟ ಇರುಳಿನ ನೆರಳೇ-
ಒಂದೆಡೆಯೆ ನಿಲ್ಲದ ಸಂಚರಣ ಗುಣವೆಮಗೆ ನೀಡಿ॥೧೬॥

೧೩. ಮೃತ್ಯುಂಜಯ ಪೂಜೆ

ತ್ರಯಂಬಕಂ ಯಜಾಮಹೇ, ಸುಗಂಧಿಂ ಪುಷ್ಟಿವರ್ಧನಂ
ಉರ್ವಾರುಕಂ ಇವ ಬಂಧನಾನ್, ಮೃತ್ಯೋರ್ ಮುಕ್ಷೀಯ
ಮಾ ಅಮೃತಾತ್॥೧೭॥

ತ್ರ್ಯಂಬಕನೆ ಭಜಿಸುವೆನು ಸುಗಂಧಿ ಪುಷ್ಟಿವರ್ಧನನನ್ನು
ಮೃತ್ಯು ಕೊಂಡೊಯ್ಯದ ರೀತಿ ನನ್ನ ನೀ ಉಳಿಸೋ।
ಅಮೃತದ ಸೆಲೆಯಿಂದ ಬೇರ್ಪಡದೆ ಇರುವಂತೆ
ತೊಟ್ಟು ಕಳಚಿದ ಹಣ್ಣಿನಂದದಿ ನನ್ನ ಇರಿಸೋ॥೧೭॥

* * *

೧೪. ದೀಪಾರತಿ

(೧) ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಮಯಾ।
ಗ್ರಹಾಣ ಮಂಗಳಂ ದೀಪಂ ತ್ರೈಲೋಕ್ಯ ತಿಮಿರಾಪಹ॥೧೮॥

ತುಪ್ಪದಲಿ ಮುಳುಗೆದ್ದ ಮೂರು ಬತ್ತಿಯ ದೀಪ
ಅಗ್ನಿಯೊಡಗೂಡಿಹುದು, ಬೆಳಗುತಿಹೆನು।
ಕೊಳ್ಳು ಬಾ, ಮೂಲೋಕದೆಲ್ಲ ಹೊಲ್ಲ ಕತ್ತಲೆ ಕೊಲ್ಲು
ಒಳ್ಳಿತಿನ ಬೆಳಕನ್ನೆ ನೀ ನಮಗೆ ತೋರು!॥೧೮॥

* * *

(೨) ಭಕ್ತ್ಯಾ ದೀಪಂ ಪ್ರಯಚ್ಛಾಮಿ
ದೇವಾಯ ಪರಮಾತ್ಮನೇ।
ತ್ರಾಹಿ ಮಾಂ ನರಕಾದ್ ಘೋರಾತ್
ದಿವ್ಯ ಜ್ಯೋತಿರ್ ನಮೋಽಸ್ತು ತೇ॥೧೯॥

ಕಾಪಾಡು ಇಲ್ಲಿಂದ ಈ ಸುತ್ತ ಕವಿದಿದೆ ದಟ್ಟ
ನರಕಕೂಪದ ಘೋರ ಕಗ್ಗತ್ತಲಿನ ತಾಪ।
ನೀಡುತಿಹೆ ಭಕ್ತಿಯಲಿ ಪರಮಾತ್ಮ ದೀಪವಿದೆ ಕೋ
ನಮಿಪೆ, ಓ ದೇವನೆ, ದಿವ್ಯ ಜ್ಯೋತಿರೂಪ॥೧೯॥

೧೫. ಮಹಾಮಂಗಳಾರತಿ

(ಇದು ಕೊನೆಗೆ ನೈವೇದ್ಯ ಆದಮೇಲೆ. (ವಿಶೇಷವಾಗಿ ಅಲಂಕರಿಸಲ್ಪಟ್ಟ ಒಂದೇ ಬತ್ತಿಯು, ಹಲವು ಬತ್ತಿಗಳ, ಮತ್ತು ಕರ್ಪೂರದ ಇತ್ಯಾದಿ ವಿವಿಧ ಮಂಗಳಾರತಿಗಳನ್ನ ದೇವರಿಗೆ ಈಗ ಮಾಡುವುದು. ಎಲ್ಲರೂ ಎದ್ದು ನಿಂತು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು.)

(೧) ಕರ್ಪೂರದಾರತಿ

ಕರ್ಪೂರಗೌರಂ ಕರುಣಾವತಾರಂ, ಸಂಸಾರಸಾರಂ ಭುಜಗೇಂದ್ರಹಾರಮ್।
ಸದಾವಸಂತಂ ಹೃದಯಾರವಿಂದೇ, ಭವಂ ಭವಾನೀಸಹಿತಂ ನಮಾಮಿ ॥೨೦॥

ಕರುಣೆಯೇ ಒಡಲಾಗಿ ಬಂದೆದುರು ನಿಂದವನೆ, ಬಂಧುರನೇ,
ಬೆಳ್ಳಿಬಿಳುಪಿನ ಕರ್ಪೂರದಂದದ ಸುಂದರನೆ, ಸಾಂಬಶಿವನೆ,
ಸಂಸಾರಸಾರ ಹಾವ ಕೊರಳ ಸರ ತೊಟ್ಟವನೇ, ಗಟ್ಟಿಗನೆ,
ನನ್ನೆದೆಯ ಕಮಲದಲಿ ನೆಲಸಿಹನೆ, ಶಂಕರನೇ ನಮನ!॥೨೦॥

(೨) ನೀರಾಜನದ ಆರತಿ
ಓಂ ನ ತತ್ರ ಸೂರ್ಯೋ ಭಾತಿ, ನ ಚಂದ್ರ ತಾರಕಂ
ನೇ ಮಾ ವಿದ್ಯುತೋ ಭಾಂತಿ ಕುತೋಽಯಂ ಅಗ್ನಿಃ।

ತ್ವಂ ಏವ ಭಾಂತಂ ಅನುಭಾತಿ ಸರ್ವಂ,
ತಸ್ಯ ಭಾಸಾ ಸರ್ವಂ ಇದಂ ವಿಭಾತಿ॥೨೧॥

ಅಲ್ಲಿ ರವಿ ಮೂಡುವುದಿಲ್ಲ. ಚಂದ್ರ ಹೊಳೆಯುವುದಿಲ್ಲ,
ತಾರೆ ಮಿನುಗುವುದೂ ಇಲ್ಲ, ಮಿಂಚುಗಳ ಝಳಪೆಂದಿಲ್ಲ;
ಎಲ್ಲಿ ಅಗ್ನಿಯ ಸೊಲ್ಲು? ಪ್ರತಿಫಲನವೆಲ್ಲಕೂ ಮೂಲ-
ಆ ಹೆಬ್ಬೆಳಕೆ ಬೆಳಗಿ ಬೆಳಗಿಸುತಿದೆ ಸದಾ ಜಗವನೆಲ್ಲ॥೨೧॥

೧೬.ಪುಷ್ಪಾಂಜಲಿ ಮತ್ತು ಸಾಮೂಹಿಕ ಪ್ರದಕ್ಷಿಣೆ; ನಮಸ್ಕಾರ

(ಕೈಯಲ್ಲಿ ಹೂವನ್ನು ಮತ್ತು ಮಂತ್ರಾಕ್ಷತೆಯನ್ನು ಇರಿಸಿಕೊಂಡು, ದೇವರಿಗೆ ಪ್ರದಕ್ಷಿಣೆ-ಯನ್ನು ಮಾಡಿ ಅಥವಾ ತಾವು ನಿಂತಲ್ಲೇ ಎಡಬದಿಯಿಂದ ಬಲಭಾಗಕ್ಕೆ ತಿರುಗುತ್ತಾ ಮೂರು ಬಾರಿ ಪ್ರದಕ್ಷಿಣೆ ಮಾಡಿ, ದೇವರ ಬಳಿ ಹೋಗಿ, ಕೈಯಲ್ಲಿರುವ ಪುಷ್ಪಾಂಜಲಿ-ಯನ್ನು ಸಮರ್ಪಿಸುತ್ತಾ ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದು.)

ಯಾನಿ ಕಾನಿ ಚ ಪಾಪಾನಿ ಜನ್ಮಾಂತರ ಕೃಪಾನಿ ಚ।
ತಾನಿ ತಾನಿ ವಿನಶ್ಯಂತಿ ಪ್ರದಕ್ಷಿಣ ಪದೇ ಪದೇ॥
ಪಾಪೋಽಹಂ, ಪಾಪಕರ್ಮಾಹಂ, ಪಾಪಾತ್ಮಾ, ಪಾಪಸಂಭವಃ।
ತ್ರಾಹಿ ಮಾಂ ಕೃಪಯಾ, ದೇವ, ಶರಣಾಗತ ವತ್ಸಲ॥
ಅನ್ಯಥಾ ಶರಣಂ ನಾಸ್ತಿ, ತ್ವಂ ಏವ ಶರಣಂ ಮಮ।
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ಜಗದೀಶ್ವರ ॥೨೨॥

ತಿಳಿತಿಳಿದೊ ತಿಳಿಯದೆಯೋ ಮಾಡಿದಾ ತಪ್ಪುಗಳು
ಪಾಪವಾಗಾವರಿಸಿದೆ ತುಂಬಿ ನನ್ನ ಒಳಗೆ ಹೊರಗೆ;
ಏನೇನ ಪಾಪಗಳ ಎಸಗಿದೆನೋ ಜನ್ಮಜನ್ಮಾಂತರದಿ
ಹೆಜ್ಜೆ ಹೆಜ್ಜೆಗೂ ನಾಶವಾಗಲವು ನಿನ್ನ ಸುತ್ತುತ್ತಿರಲು;
ನೀನಲ್ಲದಿನ್ನಾರು ನೆರಳು ಮೊರೆಹೊಕ್ಕವಗೆ ದೀನನಿಗೆ-
ಇದನರಿತು ಪೊರೆ, ಜಗದೀಶ, ದಯೆಯ ತೋರು॥೨೨॥

೧೭. ಸಾಮೂಹಿಕ ಪ್ರಾರ್ಥನಾ

(೧)ತ್ವಂ ಏವ ಮಾತಾ, ಚ ಪಿತಾ ತ್ವಂ ಏವ।
ತ್ವಂ ಏವ ಬಂಧುಶ್, ಚ ಸಖಾ ತ್ವಂ ಏವ।
ತ್ವಂ ಏವ ವಿದ್ಯಾ, ದ್ರವಿಣಂ ತ್ವಂ ಏವ।
ತ್ವಂ ಏವ ಸರ್ವಂ, ಮಮ ದೇವ ದೇವ॥೨೩॥
ನನ್ನ ತಾಯಿಯೂ ನೀನೆ, ನನ್ನ ತಂದೆಯೂ ನೀನೆ;
ಬಂಧುವೂ ಗೆಳೆಯನೂ ನೀನೆ, ನೀನೇ;
ವಿದ್ಯೆ ಬುದ್ಧಿಯು ನೀನೆ, ಸಂಪತ್ತು ಸಿರಿ ನೀನೆ,
ನನಗೆ ಸಕಲ ಸರ್ವಸ್ವವೆನೆ- ನೀನೊಬ್ಬನೇ॥೨೩॥

(೨)ತೇಜೋಽಸಿ, ತೇಜೋ ಮಯಿ ದೇಹಿ।
ವೀರ್ಯಂ ಅಸಿ, ವೀರ್ಯಂ ಮಯಿ ದೇಹಿ।
ಬಲಂ ಅಸಿ, ಬಲಂ ಮಯಿ ದೇಹಿ।
ಓಜೋಽಸಿ, ಓಜೋ ಮಯಿ ದೇಹಿ।
ಮನ್ಯುರ್ ಅಸಿ, ಮನ್ಯುಂ ಮಯಿ ದೇಹಿ।
ಸಹೋಽಸಿ, ಸಹೋ ಮಯಿ ದೇಹಿ॥೨೪॥
ನೀನು ತೇಜೋರಾಶಿ. ನನಗಿನಿತು ಪ್ರಭೆಯನು ನೀಡು;
ಹೂಡು ಬಲ ನೀ ಶಕ್ತಿಯ ಬೀಡು, ಸಾಮರ್ಥ್ಯಗಳ ನೆಲೆವೀಡು;
ಕೆಟ್ಟದಕೆ ನಸು ಮುನಿಸು ಸಿಡಿಮಿಡಿಯೂ ಇರಲಿ ಬಿಡು,
ಇಡು ಸಹನೆ, ಕೊಡು ಕಾಂತಿ, ವಿನಯ ಮನೆ ಮಾಡು॥೨೪॥

* * *

(೩) ರೂಪಂ ದೇಹಿ, ಜಯಂ ದೇಹಿ, ಯಶೋ ದೇಹಿ, ದ್ವಿಷೋ ಜಹಿ।
ಸಾಲೋಕ್ಯಂ, ದೇಹಿ ಸಾಮೀಪ್ಯಂ, ಸಾನ್ನಿಧ್ಯಂ ಸಾಯುಜ್ಯಂ ಏವ ಚ॥೨೫॥
ಆರೋಗ್ಯ ರೂಪವಿಡು, ನಡೆಗೆ ಗೆಲುವನು ನೀಡು,
ಆರ್ತರಿಗೆ ನೆರವಿತ್ತೆನೆಂಬ ಕೀರ್ತಿ ಬೆಳೆಸು;

ಹಗೆತನವದೇನಿರದ ಕೆಳೆತನವೆ ತುಂಬಿರುವ
ಬದುಕ ಬಾಳುವ ತೆರದಿ ಸರಿದಾರಿ ಹರಸು;
ನಿನ್ನ ಕಾಣುವ ಭಾಗ್ಯ, ಸನಿಹದಲೆ ಇರುವ ಸುಖ,
ನಿನ್ನಡಿಗೆ ಪೊಡಮಡಲು ದೊರೆಯೆ ಪುಣ್ಯ,
ನನ್ನೆದೆಗೆ ನೀ ಬಂದು, ಇಂದು ಅಲ್ಲಿಯೆ ನಿಂದು-
ನಿನ್ನ ನಾ ಕೂಡಲೆನೆ ನಾನು ಧನ್ಯ॥೨೫॥

೧೮. ಅಪರಾಧ ಕ್ಷಮಾಪಣೆ

(ಪೂಜೆಯನ್ನ ಭಕ್ತಿಯಿಂದ ಶ್ರದ್ಧೆಯಿಂದ ಮಾಡಬೇಕು ಜೊತೆಗೆ ಪೂಜೆ ಮಾಡುವ ಒಂದು ಸಾಂಪ್ರದಾಯಿಕ ವಿಧಿ ಏನಿದೆಯೋ ಅದರಂತೆ ಪೂಜಿಸಬೇಕು. ಆದರೆ ಅನಿವಾರ್ಯ ಕಾರಣಗಳಿಗಾಗಿ ಏನಾದರೂ ತಪ್ಪುಗಳನ್ನು ಮಾಡಿದ್ದರೆ ಅವನ್ನೆಲ್ಲಾ ಮನ್ನಿಸಬೇಕೆಂದು ದೇವರನ್ನು ಈಗ ಕೇಳಿಕೊಳ್ಳುತ್ತೇವೆ.)

(೧) ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ, ತಪ: ಪೂಜಾ ಕ್ರಿಯಾದಿಷು।
ನ್ಯೂನಂ ಸಂಪೂರ್ಣತಾಂ ಯಾತು ಸದ್ಯೋ ವಂದ್ಯೇ ತಂ
ಅಚ್ಯುತಮ್॥೨೬॥

ಯಾರ ನಾ ನೆನೆದೊಡನೆ, ಯಾರ ನಾ ಹೆಸರಿಸಿದೆ ಎನೆ,
ತಪದಲ್ಲಿ, ಪೂಜೆಯಲಿ ತೊಡಗಿದುಜ್ಜುಗದಿ,
ಅರೆ ಕೊರೆಗಳೆಲ್ಲವೂ ಕರಗಿ, ವಿಧಿ ವಿಧಾನವೆ ಜರುಗಿ,
ಪೂರ್ಣತೆಯ ಪಡೆವವೋ ಆ ಹರಿಯ ನೆನೆವೆ ॥೨೬॥

* * *

(೨) ಮಂತ್ರಹೀನಂ, ಕ್ರಿಯಾಹೀನಂ, ಭಕ್ತಿಪೂರ್ಣಂ, ಜನಾರ್ದನ।
ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದ್ ಅಸ್ತು
ಮೇ॥೨೭॥

ಪೂಜೆ ಮಾಡುವ ವೇಳೆ ಮಂತ್ರ ಮರೆತಿರಬಹುದು,
ಆಚರಣೆಗಳ ನಡು ನಡುವೆ ಎಡವಿರಲೂ ಬಹುದು;

ಶ್ರದ್ಧೆ ಭಕ್ತಿಯಲಿನಿತು ಕೊರತೆ ತಲೆದೋರಿರಬಹುದು
ಎಲ್ಲ ಮನ್ನಿಸು, ಪೂಜೆ ಪರಿಪೂರ್ಣದೊಲು ಪರಿಗಣಿಸು॥

(೩) ಅಪರಾಧ ಸಹಸ್ರಾಣಿ ಕ್ರಿಯನ್ತೇ ಅಹರ್ನಿಶಂ ಮಯಾ।
ದಾಸೋಽಹಂ ಇತಿ ಮಾಂ ಮತ್ವಾ ಕ್ಷಮಸ್ವ ಜಗದೀಶ್ವರ॥೨೮॥
ನೂರಾರು ತಪ್ಪುಗಳ ಹಗಲಿರುಳೂ ಮಾಡುತಿಹೆ,
ಎಡುವುತ್ತ ನಡೆಯುತ್ತ ನಿನ್ನ ಬಳಿ ಬರುತಿರುವೆ;
ಏನೋ ಪಾಪ, ನನ್ನ ಪ್ರಿಯ ಭಕ್ತನಿವ, ತಿಳಿಯದವ
ಎಂದೆನುತ, ಜಗದೀಶ, ಎಲ್ಲ ಮನ್ನಿಸೊಡೆಯ॥೨೮॥

(೪) ಕರ–ಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ।
ಶ್ರವಣ ನಯನಜಂ ವಾ ಮಾನಸಂ ವಾ ಅಪರಾಧಂ।
ವಿಹಿತಂ ಅವಿಹಿತಂ ವಾ ಸರ್ವಂ ಏತತ ಕ್ಷಮಸ್ವ।
ಶಿವ ಶಿವ ಕರುಣಾಬ್ಧೇ ಮಹಾದೇವ ಶಂಭೋ॥೨೯॥
ಕೈಕಾಲೆ ತಪ್ಪೆಸಗಿರಬಹುದು, ದೇಹವೇ ಮಾಡಿರಬಹುದು;
ಸಲ್ಲದುದ ನಾ ನೋಡಿ, ಕೇಳಿ, ಆಡಿರಲೂ ಬಹುದು;
ಅನಿವಾರ್ಯ, ವಿಹಿತವೆಂದೆನಿಸಿ ತಪ್ಪಾಗಿ ನಡೆದಿರಬಹುದು–
ಎಲ್ಲವನು ಮನ್ನಿಸು, ಪ್ರಭುವೆ, ಓ ಕರುಣಾಳು ದೇವ॥೨೯॥

೧೯. ದೇವ ದರ್ಶನಭಾಗ್ಯಕ್ಕೆ ವಂದನೆ

ಗತಂ ಪಾಪಂ ಗತಂ ದುಖಂ, ಗತಂ ದಾರಿದ್ರ್ಯಂ ಏವ ಚ|
ಆಗತ: ಸುಖ ಸಂಪತ್ತಿ:, ಹೇ ದೇವ, ತವ ದರ್ಶನಾತ್॥೩೦॥
ಇರುಳು ಜಾರಿತು, ಹೊತ್ತು ಮೂಡಿತು
ದೈನ್ಯತೆಯು ಬಿಸಿ ಹಬೆ ಇಂಗಿತು;
ಮುಚ್ಚಿ ತುಕ್ಕಿದ ಕಿಟಕಿ ಬಿಚ್ಚಿತು,
ಬೆಳಕ ಕಿರಣ ಒಳ ಹೊಕ್ಕಿತು;
ತೆರೆದ ಬಾಗಿಲಿನೊಳಗೆ ನುಸುಳಿದ
ಗಾಳಿ ಜೀವಕುಸಿರ ಹಸಿರೂಡಿತು;

ನನ್ನ ಕಣ್ಣನು ನೀನು ತುಂಬಲು
ಜೇನ ಕನಸ ಸಿಹಿ ನನಸಾಯಿತು॥೩೦॥

೨೦. ಸರ್ವಸಮರ್ಪಣ

(ಕರ್ಮೇಂದ್ರಿಯಗಳಿಂದಲೂ, ಜ್ಞಾನೇಂದ್ರಿಯಗಳಿಂದಲೂ ನಾವು ಏನನ್ನು ಮಾಡುತ್ತೇವೋ, ಅದೆಲ್ಲವೂ ಒಂದು ಬಗೆಯಲ್ಲಿ ದೇವರ ಪೂಜೆಯೇ. ಅದನ್ನೆಲ್ಲ ಸರಿಯಾದ ಅರ್ಥದಲ್ಲಿ ಮನವರಿಕೆ ಮಾಡಿಕೊಳ್ಳುತ್ತಾ ಎಲ್ಲವನ್ನೂ ದೇವರಿಗೇ ಈಗ ಸಮರ್ಪಿಸುವುದು.)

(೧) ಆತ್ಮಾ ತ್ವಂ, ಗಿರಿಜಾ ಮತಿಃ, ಪರಿಜನಾಃ ಪ್ರಾಣಾಃ, ಶರೀರಂ ಗೃಹಂ,
ಪೂಜಾ ತೇ ವಿಷಯೋಪಭೋಗರಚನಾ, ನಿದ್ರಾ ಸಮಾಧಿಸ್ಥಿತಿಃ।
ಸಂಚಾರಸ್ತು ಪದಯೋಃ ಪ್ರದಕ್ಷಿಣ ವಿಧಿಃ, ಸ್ತೋತ್ರಾಣಿ
ಸರ್ವಾ ಗಿರೋ,
ಯದ್ಯತ್ ಕರ್ಮ ಕರೋಮಿ ತತ್ತದ್ ಅಖಿಲಂ,
ಶಂಭೋ, ತವಾರಾಧನಂ॥೩೧॥

ನನ್ನ ಆತ್ಮವೇ ನೀನು, ಬುದ್ಧಿಯೇ ಪಾರ್ವತೀದೇವಿ
ಪ್ರಾಣಗಳೇ ಅನುಚರರು, ನಿನ್ನ ದೇಗುಲ ನನ್ನ ದೇಹ.
ವಿಷಯಸುಖದನುಭವ ನಿನ್ನ ನಿತ್ಯ ಪೂಜಾ ವಿಧಿಯು,
ನಿದ್ರೆ ಸಮಾಧಿಯ ಮಟ್ಟ, ನಡೆದಾಟ ಓಡಾಟ ನಿನ್ನ ಸುತ್ತ;
ನನ್ನ ಮಾತುಗಳೆಲ್ಲ ನಿನ್ನ ಸುಗುಣಗಾನವೇ- ಹೀಗೆ,
ಯಾವ ಕೆಲಸದಿ ತೊಡಗಿದರೂ ಅದು ನಿನ್ನ ಸೇವೆ ॥೩೧॥

(೨) ಕಾಯೇನ ವಾಚಾ ಮನಸಾ ಇಂದ್ರಿಯೈರ್ ವಾ।
ಬುದ್ಧ್ಯಾತ್ಮನಾ ವಾ ಪ್ರಕೃತೇ: ಸ್ವಭಾವಾತ್।
ಕರೋಮಿ ಯದ್ ಯತ್ ಸಕಲಂ ಪರಸ್ಮೈ।
ನಾರಾಯಣ- ಇತಿ ಸಮರ್ಪಯಾಮಿ॥೩೨॥

॥ಶ್ರೀ ಕೃಷ್ಣಾರ್ಪಣಮಸ್ತು॥

ಮಾಡಿದೆಲ್ಲವದನ್ನು- ದೈಹಿಕವೋ ವಾಚಿಕವೋ
ಇಂದ್ರಿಯಗಳಿಂದಲೋ ಅಥವ ಮನಸಿನಲ್ಲೋ

ಬುದ್ಧಿಪೂರ್ವಕ ಅಥವ ಸಹಜವಾಗಿ ಅದೇನೇ ಇರಲಿ-
ಎಲ್ಲವೂ ನಿನ್ನದೇನೇ ಎನುತವನ ಅಡಿಗಿಡುವೆನು. ॥೩೨॥
ಎಲ್ಲವೂ ಭಗವಂತ, ನಿನಗೇ ಅರ್ಪಿತವಾಗಲಿ॥

೨೧. ಭಕ್ತನ ಹೃದಯದೊಳಗೆ ಬಂದಿರಲು ಆಹ್ವಾನ

ಆವಾಹನಂ ನ ಜಾನಾಮಿ, ನ ಜಾನಾಮಿ ವಿಸರ್ಜನಂ
ಪೂಜಾಂ ಚೈವ ನ ಜಾನಾಮಿ ತವ ದಾಸೋಽಸ್ಮಿ ಸರ್ವದಾ॥೩೩॥
ಹೃತ್ ಪದ್ಮ ಕರ್ಣಿಕಾ ಮಧ್ಯೇ, ದೇವ್ಯಾ ಸಹ ಜಗದೀಶ್ವರ,
ಪ್ರವಿಶ ತ್ವಂ ಮಹಾದೇವ, ಸರ್ವೈರ್ ಆವರಣೈ: ಸಹ॥೩೪॥
ದೇವ ದೇವ ಜಗನ್ನಾಥ, ಹೃದಯೇ ಮಮ ನಿರ್ಮಲೇ।
ಯಾಗ ದೇಶಾತ್ ಸಮಾಗತ್ಯ ನಿವಾಸಂ ಕುರು ಲೀಲಯಾ॥೩೫॥

ಕರೆಯುವುದು ಗೊತ್ತಿಲ್ಲ, ಕಳಿಸುವುದೂ ಗೊತ್ತಿಲ್ಲ;
ಹೇಗೆ ಪೂಜಿಸುವುದಂತೂ ಅರಿಯೆನಲ್ಲ;
ಅದರೊಂದನು ನೀನು, ಎಂತಿರಲಿ, ಬಲ್ಲೆಯೋ ದೇವ-
ನಾ ನಿನ್ನ ಅಡಿಯಾಳೇನೆ ಎಂದು ಎಂದೂ.॥೩೩॥
ಬಾ ಕರುಣೆಯ ಕಡಲ ದೇವಿಯೊಡಗೂಡಿ ಎನ್ನೆದೆಯೆಡೆಗೆ,
ದಿವ್ಯ ದೇಗುಲವಾಗಿ ಅದು ಪವಿತ್ರಗೊಳಲಿ;॥೩೪॥
ಜೀಯ, ದೇವರ ದೇವ, ಜಗದೊಡೆಯ, ಕೊಳೆ ಕಳೆದ
ಎನ್ನೆದೆಯಲೇ ಮನೆ ಮಾಡು ಬಂದು ಈಗ!॥೩೫॥

೨೨. ಶಾಂತಿಮಂತ್ರ ಪಠನ

(೧) ಓಂ ದ್ಯೌ ಶಾನ್ತಿ। ಅನ್ತರಿಕ್ಷ: ಶಾನ್ತಿ। ಪೃಥಿವೀ ಶಾನ್ತಿ। ಪರ್ವತಾ: ಶಾನ್ತಿ।
ಆಪ: ಶಾನ್ತಿ। ನದ್ಯಾ: ಶಾನ್ತಿ। ಓಷಧಯ: ಶಾನ್ತಿ। ವನಸ್ಪತಯ: ಶಾನ್ತಿ।
ಬ್ರಹ್ಮ ಶಾನ್ತಿ। ಸರ್ವೇಷಾಂ ಶಾನ್ತಿರೇವ ಶಾನ್ತಿರಸ್ತು॥
ಓಂ ಶಾನ್ತಿ: ಶಾನ್ತಿ: ಶಾನ್ತಿ:॥೩೬॥

ಮೇಲೆ ಆಗಸದಲ್ಲಿ, ಅಂತರಿಕ್ಷದಲಿ, ಇಲ್ಲಿ ಬುವಿಯಲ್ಲಿ,
ಗಿರಿಗಳಲಿ, ನೀರಿನಲಿ, ಹೊನಲು, ಎಲೆ ಮೂಲಿಕೆಯ ಕಂಪಿನಲಿ,
ಗಿಡಮರದ ಸೊಂಪಿನಲಿ, ಹರಡಿ ಹಬ್ಬಿದ ಬಳ್ಳಿಗಳ ತಂಪಿನಲಿ
–ಬ್ರಹ್ಮತತ್ತ್ವದಲಿ ಎಲ್ಲೆಲ್ಲೂ ಎಂದೆಂದೂ ಶಾಂತಿಯಿರಲಿ! ॥೩೬॥

(೨) ಮಧುವಾತಾ ಋತಾಯತೇ,
ಮಧು ಕ್ಷರನ್ತಿ ಸಿನ್ಧವಃ।
ಮಾಧ್ವೀರ್ ನ ಸನ್ತು ಓಷಧೀಃ।
ಮಧು ನಕ್ತಂ ಉತೋಷಸಿ।
ಮಧುಮತ್ ಪಾರ್ಥಿವಂ ರಜಃ।
ಮಧು ದ್ಯೌರ್ ಅಸ್ತು ನಃ ಪಿತಾ।
ಮಧುಮಾನ್ ನೋ ವನಸ್ಪತಿಃ।
ಮಧುಮಾನ್ ಅಸ್ತು ಸೂರ್ಯಃ।
ಮಾಧ್ವೀರ್ ಗಾವೋ ಭವನ್ತು ನಃ॥೩೭॥

ಎಲ್ಲೆಡೆ ಜೇನು, ಎಲ್ಲವೂ ಜೇನು–
ಜೇನೇ ಆಗಿರಲಿ!
ಅರಳುತ ಎಲ್ಲೆಡೆ ಹೂಗಳು ಬೀರಲಿ
ಪರಿಮಳ ಗಾಳಿಯಲಿ;
ಸುತ್ತಲೂ ಮುತ್ತಿಹ ಧೂಳಿನ ಕಣ ಕಣ
ಜೇನೇ ಆಗಿರಲಿ!
ಹನಿ ಹನಿ ಕೂಡುತ ತೆರೆ ತೊರೆ ನದಿಯಲಿ
ಸಕ್ಕರೆ ನೀರಿರಲಿ;
ನೆಲ ನಭ ಗಿಡ ಮರ ಗಿರಿ ಅಣು ಅಣುವಲಿ
ಜೇನೇ ನೆರೆದಿರಲಿ!
ಚಂದಿರ ಸೂರ್ಯನ ಚಿಕ್ಕೆಯ ಸೊಬಗಲಿ
ಕಣ್ಣಿಗೆ ತಂಪಿರಲಿ;
ಬೆಳಗೂ ಬೈಗಲಿ ಹಗಲಲಿ ಇರುಳಲಿ
ಜೇನಿನ ಇನಿದಿರಲಿ!

ಚಿಲಿಪಿಲಿ ಹಕ್ಕಿಯ ಹಾಡಲಿ ತಾಯಿಯ
ಜೋಗುಳದಿಂಪಿರಲಿ;
ಸಾಕಿದ ಹಸು ಕರು ಪ್ರಾಣಿಗಳಕ್ಕರೆ
ಜೇನಿನ ಸವಿ ತರಲಿ!
ಒಳಹೊರಗೆಲ್ಲೆಡೆ, ಕನಸಲಿ ನನಸಲಿ,
ಜೇನೇ ತುಂಬಿರಲಿ !
ನಡೆ ನುಡಿಗಳಲಿ ಮನದಲಿ ನಮ್ಮಲಿ–
ಜೇನೇ ಜೇನಿರಲಿ!॥೩೭॥

(೩) ಓಂ ಸಹ ನೌ ಅವತು। ಸಹ ನೌ ಭುನಕ್ತು।
ಸಹವೀರ್ಯಂ ಕರವಾವಹೈ। ತೇಜಸ್ವಿನೌ ಅವಧೀತಂ ಅಸ್ತು।
ಮಾ ವಿದ್ವಿಷಾವಹೈ॥ ಓಂ ಶಾನ್ತಿ: ಶಾನ್ತಿ: ಶಾನ್ತಿ:॥೩೮॥
ಜೊತೆಜೊತೆಯ ನಮ್ಮಿಬ್ಬರನವನು ಪೊರೆಯುತಲಿರಲಿ;
ನಮ್ಮನಕ್ಕರೆಯಿಂದ ಭಗವಂತ ಪಾಲಿಸಲಿ ಪೋಷಿಸಲಿ;
ಕಸುವು ತುಂಬಿಯೆ ತೊಡಗಿ ಶ್ರಮಿಸೋಣ ಜೊತೆಗೂಡಿ;
ಬೆಳಕ ಮೈಗೂಡಿಸಿಕೊಳಲು ನಮ್ಮ ಓದುಬರಹಗಳಿರಲಿ;
ಯಾರ ದ್ವೇಷಿಸದ ಸ್ನೇಹದ ಬಾಳು ನಮದಾಗಲಿ! ॥೩೮॥

(೪)ಓಂ ಅಸತೋ ಮಾ ಸದ್ಗಮಯ।
ತಮಸೋ ಮಾ ಜ್ಯೋತಿರ್ ಗಮಯ।
ಮೃತ್ಯೋರ್ ಮಾ ಅಮೃತಂ ಗಮಯ॥
ಓಂ ಶಾನ್ತಿ: ಶಾನ್ತಿ: ಶಾನ್ತಿ:॥೩೯॥
ಇಲ್ಲ ಅಲ್ಲದುದರಿಂದ ಹೌದು ಇದೇ–ಯ ಕಡೆಗೆ,
ಕತ್ತಲಾಳಗಳಿಂದ ಮೇಲೆ ಬೆಳಕಿನ ದಡಕೆ,
ಅಳಿದು ಉಳಿಯದುದರಿಂದ ಅಳಿಯದುದರೆಡೆಗೆ,
ನನ್ನನ್ನು ನಡೆಸಯ್ಯ, ಕರೆದೊಯ್ಯಿ, ಕರೆದುಕೋ ನನ್ನ!॥೩೯॥

* * *

(೫) ಓಂ ಪೂರ್ಣಂ ಅದಃ, ಪೂರ್ಣಂ ಇದಂ,
ಪೂರ್ಣಾತ್ ಪೂರ್ಣಂ ಉದಚ್ಯತೇ।
ಪೂರ್ಣಸ್ಯ ಪೂರ್ಣಂ ಆದಾಯ,
ಪೂರ್ಣಂ ಏವ ಅವಶಿಷ್ಯತೇ॥
ಓಂ ಶಾನ್ತಿಃ ಶಾನ್ತಿಃ ಶಾನ್ತಿಃ॥೪೦॥

ಇದು ಪೂರ್ಣ, ಅದು ಪೂರ್ಣ, ತತ್ತ್ವ ಅನಂತತೆಯದೇ ಎಲ್ಲ;
ಪೂರ್ಣತೆಯೋ ಪೂರ್ಣಬ್ರಹ್ಮನಲದಂತೂ ಅವಿಭಾಜ್ಯ ಅಂಗ;
ಕಳೆದರೂ ಕೂಡಿದರೂ ಹೇಗೂ ಅನಂತ ಆ ಅನಂತವೇ ತಾನೆ-
ಈ ರಹಸ್ಯ ನಿಗೂಢತೆಯೊಂದು ಜಗದ ಬೆರಗ ರಂಗ!॥೪೦॥

೨೩. ಸಾಮೂಹಿಕ ಧ್ಯಾನ

(ಈಗ ಎಲ್ಲರೂ ಕಣ್ಣುಮುಚ್ಚಿ ಕುಳಿತುಕೊಂಡು ಎರಡು-ಮೂರು ನಿಮಿಷ ಭಗವಂತನ ಧ್ಯಾನ ಮಾಡುವುದು. ಹಣೆಯಲ್ಲಿ ಹುಬ್ಬುಗಳ ಮಧ್ಯದಲ್ಲಿ ಭಗವಂತನನ್ನು ಕೇಂದ್ರೀಕರಿಸಿಕೊಂಡು ಧ್ಯಾನ ಮಾಡುವುದು ಉತ್ತಮ. ಈಸಂದರ್ಭದಲ್ಲಿ ಹಿನ್ನೆಲೆಯಲ್ಲಿ ಯಾರಾದರೂ ಒಬ್ಬರು ನಿರಂತರವಾಗಿ ಓಂಕಾರ ಪಠಣ ಮಾಡುತ್ತಿದ್ದರೆ ಒಳ್ಳೆಯದು)

೨೪. ಆಶೀರ್ವಾದ

(ಪೂಜೆಗೆ ಬಂದ ಗುರು ಹಿರಿಯರು ಪೂಜೆ ಮಾಡಿದವರನ್ನು ಮತ್ತು ಕುಟುಂಬದ ಎಲ್ಲ ಹಿರಿ-ಕಿರಿಯರನ್ನು ಆಶೀರ್ವದಿಸುವುದು.)

(೧) ಕಾಲೇ ವರ್ಷತು ಪರ್ಜನ್ಯ: ಪೃಥಿವೀ ಸಸ್ಯಶಾಲಿನೀ
ದೇಶೋಽಯಂ ಕ್ಷೋಭರಹಿತೋ ಸಜ್ಜನಾ: ಸನ್ತು ನಿರ್ಭಯಾ:।
ಸರ್ವೇಽಪಿ ಸುಖಿನಸ್ ಸನ್ತು, ಸರ್ವೇ ಸನ್ತು ನಿರಾಮಯಾ:।
ಸರ್ವೇ ಭದ್ರಾಣಿ ಪಶ್ಯನ್ತು; ಮಾ ಕಶ್ಚಿದ್ ದು:ಖಭಾಗ್
ಭವೇತ್॥೪೧॥

ಕಾಲಕಾಲಕೆ ಮಳೆ ಬೀಳುತಿರಲಿ; ಇಳೆ
ತುಂಬಿ ತುಳುಕಲಿ ಬೆಳೆಯಲಿ;
ಶಾಂತಿ ನೆಲಸಲಿ ನಮ್ಮ ರಾಷ್ಟ್ರದಿ

ಜನರು ನೆಮ್ಮದಿಗೊಳ್ಳಲಿ;
ಸುಖಿಗಳಾಗಿಯೇ ಇರಲಿ ಎಲ್ಲರೂ
ಚಿಂತೆ ಸುಳಿಯದ ತೆರದಲಿ;
ದು:ಖ ಯಾರಿಗೂ ತಟ್ಟದಂದದಿ-
ಒಳಿತನೆಲ್ಲರು ಕಾಣಲಿ! ॥೪೧॥

(೨) ಸ್ವಸ್ತಿ ಪ್ರಜಾಭ್ಯ: ಪರಿಪಾಲಯನ್ತಾಮ್।
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾ:।
ಗೋ ಬ್ರಾಹ್ಮಣೇಭ್ಯ: ಶುಭಮಸ್ತು ನಿತ್ಯಂ,
ಲೋಕಾ: ಸಮಸ್ತಾ: ಸುಖಿನೋ ಭವನ್ತು॥೪೨॥
ನ್ಯಾಯಮಾರ್ಗದಿ ಒಡೆಯರಾಳಲಿ, ಒಳ್ಳೆಯದೆ ಪ್ರಜೆಗಳಿಗೆ ಆಗಲಿ,
ನಿತ್ಯಮಂಗಳ ಶುಭವಾಗುತಾಗುತ ಪಶುಪ್ರಾಣಿ ಸಜ್ಜನರು
ಸೌಹಾರ್ದತೆಯ ನೆಮ್ಮದಿಯ ಸವಿಯಲಿ, ಶಾಂತಿ ಬೇರೂರಿ ನಿಲ್ಲಲಿ-
ಸುಖಿಗಳಾಗಿಯೇ ಇರಲಿ ಎಲ್ಲರೂ ನಮ್ಮ ಲೋಕದಲಿ॥೪೨॥

(೩) ಸರ್ವೇ ಜನಾ: ಸುಖಿನೋ ಭವನ್ತು।
ಸಮಸ್ತ ಸನ್ಮಾಂಗಳಾನಿ ಭವನ್ತು॥೪೩॥
ಸುಖವ ಸವಿಯಲಿ ಎಲ್ಲ ಜನಗಳು
ಎಲ್ಲ ಒಳ್ಳಿತು ಅವರಿಗಾಗಲಿ! ॥೪೩॥

(೪) ಲೋಕಾ: ಸಮಸ್ತಾ: ಸುಖಿನೋ ಭವನ್ತು॥
ಲೋಕಾ: ಸಮಸ್ತಾ: ಸುಖಿನೋ ಭವನ್ತು॥
ಲೋಕಾ: ಸಮಸ್ತಾ: ಸುಖಿನೋ ಭವನ್ತು॥೪೪॥
ಸುಖಿಗಳಾಗಿಯೇ ಇರಲಿ ಎಲ್ಲರೂ ನಮ್ಮ ಲೋಕದಲಿ!
ಸುಖಿಗಳಾಗಿಯೇ ಇರಲಿ ಎಲ್ಲರೂ ನಮ್ಮ ಲೋಕದಲಿ।
ಸುಖಿಗಳಾಗಿಯೇ ಇರಲಿ ಎಲ್ಲರೂ ಎಲ್ಲ ಲೋಕದಲಿ॥೪೪॥

** ಮಂಗಳಂ **

ಕರ್ನಾಟಕ ರಾಜ್ಯದ ಜಿಲ್ಲಾವಾರು ವಿಧಾನಸಭಾ ಕ್ಷೇತ್ರಗಳು

	೨೯ ಜಿಲ್ಲೆಗಳು	ಕ್ಷೇತ್ರಗಳು ೨೨೪
೧	ಬೆಳಗಾವಿ	೧ ರಿಂದ ೧೮
೨	ಬಾಗಲಕೋಟೆ	೧೯ ರಿಂದ ೨೫
೩	ವಿಜಾಪುರ	೨೬ ರಿಂದ ೩೩
೪	ಗುಲ್ಬರ್ಗ	೩೪ ರಿಂದ ೪೬
೫	ಬೀದರ್	೪೭ ರಿಂದ ೫೨
೬	ರಾಯಚೂರು	೫೩ ರಿಂದ ೫೯
೭	ಕೊಪ್ಪಳ	೬೦ ರಿಂದ ೬೪
೮	ಗದಗ	೬೫ ರಿಂದ ೬೮
೯	ಧಾರವಾಡ	೬೯ ರಿಂದ ೭೫
೧೦	ಉತ್ತರಕನ್ನಡ	೭೬ ರಿಂದ ೮೧
೧೧	ಹಾವೇರಿ	೮೨ ರಿಂದ ೮೭
೧೨	ಬಳ್ಳಾರಿ	೮೮ ರಿಂದ ೯೬
೧೩	ಚಿತ್ರದುರ್ಗ	೯೭ ರಿಂದ ೧೦೨
೧೪	ದಾವಣಗೆರೆ	೧೦೩ ರಿಂದ ೧೧೦
೧೫	ಶಿವಮೊಗ್ಗ ಮತ್ತು ಉಡುಪಿ	೧೧೧ ರಿಂದ ೧೨೨
೧೬	ಚಿಕ್ಕಮಗಳೂರು	೧೨೩ ರಿಂದ ೧೨೭
೧೭	ತುಮಕೂರು	೧೨೮ ರಿಂದ ೧೩೮
೧೮	ಕೋಲಾರ ಮತ್ತು ಚಿಕ್ಕಬಳ್ಳಾಪುರ	೧೩೯ ರಿಂದ ೧೪೯
೧೯	ಬೆಂಗಳೂರು	೧೫೦ ರಿಂದ ೧೭೭
೨೦	ಬೆಂಗಳೂರು / ರಾಮನಗರ	೧೭೮ ರಿಂದ ೧೮೫
೨೧	ಮಂಡ್ಯ	೧೮೬ ರಿಂದ ೧೯೨
೨೨	ಹಾಸನ	೧೯೩ ರಿಂದ ೧೯೯
೨೩	ದಕ್ಷಿಣಕನ್ನಡ	೨೦೦ ರಿಂದ ೨೦೭
೨೪	ಕೊಡಗು	೨೦೮ ರಿಂದ ೨೦೯
೨೫	ಮೈಸೂರು	೨೧೦ ರಿಂದ ೨೨೦
೨೬	ಚಾಮರಾಜನಗರ	೨೨೧ ರಿಂದ ೨೨೪